ಸಂಪುಟ 01 | ಸಂಚಿಕೆ 140 | ಸೋಮವಾರ 31 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಮಲೇಷ್ಯಾ ಸ್ವಾತಂತ್ರ್ಯ ದಿನ (ಹರಿ ಮೆರ್ಡೆಕಾ):** 1957ರ ಆಗಸ್ಟ್ 31ರಂದು ಮಲೇಷ್ಯಾ ದೇಶವು ಸ್ವಾತಂತ್ರ್ಯ ಪಡೆಯಿತು. ಈ ದಿನವನ್ನು ದೇಶಾದ್ಯಂತ ಸಡಗರದಿಂದ ಆಚರಿಸಲಾಗುತ್ತದೆ.

**2) ಟ್ರಿನಿಡಾಡ್ ಮತ್ತು ಟೊಬಾಗೊ ಸ್ವಾತಂತ್ರ್ಯ ದಿನ:** 1962ರಲ್ಲಿ ಈ ಕೆರಿಬಿಯನ್ ರಾಷ್ಟ್ರವು ಸ್ವಾತಂತ್ರ್ಯ ಪಡೆದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.

**3) ಅಫ್ರಿಕನ್ ಮೂಲದ ಜನರ ಅಂತರರಾಷ್ಟ್ರೀಯ ದಿನ:** ಆಫ್ರಿಕನ್ ಮೂಲದ ಜನರ ಕೊಡುಗೆಗಳನ್ನು ಮತ್ತು ಹಕ್ಕುಗಳನ್ನು ಗುರುತಿಸಲು ವಿಶ್ವಸಂಸ್ಥೆಯು ಈ ದಿನವನ್ನು ಆಚರಿಸುತ್ತದೆ.

**4) ಅಂತರರಾಷ್ಟ್ರೀಯ ಮಿತಿಮೀರಿದ ಜಾಗೃತಿ ದಿನ:** ಮಾದಕವಸ್ತುವಿನ ಮಿತಿಮೀರಿದ ಸೇವನೆಯಿಂದಾಗುವ ಸಾವುಗಳ ಬಗ್ಗೆ ಎಚ್ಚರಿಕೆ ಮತ್ತು ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ನಿಮ್ಮನ್ನು ನೀವು ದುರ್ಬಲ ಎಂದು ಪರಿಗಣಿಸುವುದೇ ದೊಡ್ಡ ಪಾಪ

– ಸ್ವಾಮಿ ವಿವೇಕಾನಂದ

# ಸಿಂಧನೂರು ಉಪನ್ಯಾಸಕರ ಕ್ರಿಕೆಟ್ ಲೀಗ್ ಸೀಸನ್–4ಕ್ಕೆ ಅದ್ದೂರಿ ಚಾಲನೆ

## ಕ್ರೀಡೆಯಿಂದ ಸ್ನೇಹ, ಒಗ್ಗಟ್ಟು ಹಾಗೂ ತಂಡದ ಮನೋಭಾವ ವೃದ್ಧಿ: ಬಸನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಉಪನ್ಯಾಸಕರು ಕೇವಲ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಬೋಧಿಸುವುದಕ್ಕೆ ಮಾತ್ರ ಸೀಮಿತರಾಗದೆ, ಕ್ರೀಡೆ, ಮನರಂಜನೆ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಸಮಾಜ-ಕ್ಕೆ ಮಾದರಿಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಅವರು ಹೇಳಿದರು.ಸಿಂಧನೂರು ನಗರದಲ್ಲಿ ಆಯೋಜಿಸಲಾಗಿದ್ದ ಸಿಂಧನೂರು ಉಪನ್ಯಾಸಕರ ಕ್ರಿಕೆಟ್ ಲೀಗ್ ಸೀಸನ್□4ರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕ್ರೀಡೆ ದೈಹಿಕ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಮಾನಸಿಕ ಉಲ್ಲಾಸ, ಆತ್ಮವಿಶ್ವಾಸ ಹಾಗೂ ಪರಸ್ಪರ ಸ್ನೇಹವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.ಶಿಕ್ಷಣ ಕ್ಷೇತ್ರದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುವ ಉಪನ್ಯಾಸಕರಿಗೆ ಇಂತಹ ಕ್ರೀಡಾಕೂಟಗಳು ತಮ್ಮ ಒತ್ತಡವನ್ನು ಕಡಿಮೆ ಮಾಡಿಕೊಂಡು



ಸಹೋದ್ಯೋಗಿಗಳೊಂದಿಗೆ ಆತ್ಮೀಯವಾಗಿ ಬೆರೆಯಲು ಉತ್ತಮ ವೇದಿಕೆಯಾಗಿವೆ. ಇಂತಹ ಕ್ರೀಡಾ ಚಟುವಟಿಕೆಗಳು ಮುಂದಿನ ದಿನಗಳಲ್ಲಿಯೂ ನಿರಂತರವಾಗಿ ನಡೆಯಬೇಕು ಎಂದು ಅವರು ಆಶಿಸಿದರು.ಅದ್ದೂರಿಯಾಗಿ ನಡೆದ ಉದ್ಘಾಟನಾ ಸಮಾರಂಭಸೀಸನ್□4 ಕ್ರಿಕೆಟ್ ಲೀಗ್‌ಗೆ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಹಾಗೂ ಮಾಜಿ ಸಚಿವರಾದ ಶ್ರೀ ವೆಂಕಟರಾವ್ ನಾಡಗೌಡ ಅವರು ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವರಾದ ಶ್ರೀ ವೆಂಕಟ-ರಾವ್ ನಾಡಗೌಡ ಅವರು, ಉಪನ್ಯಾಸಕರಿಗಾಗಿ ಆಯೋಜಿಸಲಾಗಿರುವ ಕ್ರಿಕೆಟ್ ಲೀಗ್ ಅತ್ಯಂತ ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಕ್ರೀಡಾಕೂಟದ ಮೂಲಕ ವಿವಿಧ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಒಂದೇ ವೇದಿಕೆಯಲ್ಲಿ ಸೇರಿ ಪರಸ್ಪರ ಸ್ನೇಹ, ಆತ್ಮೀಯತೆ ಹಾಗೂ ಒಗ್ಗಟ್ಟನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಕ್ರೀಡೆಯಲ್ಲಿ ಗೆಲುವು□ಸೋಲು ಸಹಜ. ಆದ-ರೆ ಕ್ರೀಡೆಯ ಮೂಲಕ ಬೆಳೆಸಿಕೊಳ್ಳುವ ಸ್ನೇಹ, ಸಹಕಾರ ಮತ್ತು ತಂಡದ ಮನೋಭಾವ ಜೀವನಪೂರ್ತಿ ಉಳಿಯುತ್ತದೆ. ಹೀಗಾಗಿ ಉಪನ್ಯಾಸಕರ ಕ್ರಿಕೆಟ್ ಲೀಗ್ ಕೇವಲ ಕ್ರಿಕೆಟ್ ಪಂದ್ಯಾವಳಿಯಾಗಿರದೆ, ಉಪನ್ಯಾಸಕರನ್ನು ಒಂದೇ ಕುಟುಂಬದಂತೆ ಬೆಸೆಯುವ ಕಾರ್ಯಕ್ರಮವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

### ❑ ಸಂಕಷ್ಟದಲ್ಲಿರುವ ಉಪನ್ಯಾಸಕರ ಕುಟುಂಬಗಳಿಗೆ ನೆರವು

ಈ ಕ್ರಿಕೆಟ್ ಲೀಗ್‌ನ ಮತ್ತೊಂದು ವಿಶೇಷ ಉದ್ದೇಶದ ಕುರಿತು ಮಾತನಾಡಿದ ಶ್ರೀ ವೆಂಕಟರಾವ್ ನಾಡಗೌಡ ಅವರು, ಲೀಗ್‌ನಲ್ಲಿ ದೊರೆಯುವ ಬಹುಮಾನ ಮೊತ್ತವನ್ನು ಸಂಕಷ್ಟದಲ್ಲಿರುವ ಉಪನ್ಯಾಸಕರ ಕುಟುಂಬಗಳಿಗೆ ನೆರವು ನೀಡಲು ಬಳಸುವ ಉದ್ದೇಶ ಹೊಂದಿರುವುದು ಶ್ಲಾಘನೀಯ ವಿಚಾರವಾಗಿದೆ ಎಂದರು.ಕ್ರೀಡೆಯೊಂದಿಗೆ ಸಾಮಾಜಿಕ ಕಳಕಳಿಯನ್ನು ಜೋಡಿಸಿರುವುದು ಈ ಕ್ರೀಡಾಕೂಟದ ವಿಶೇಷತೆಯಾಗಿದೆ. ಉಪನ್ಯಾಸಕ ಸಮುದಾಯದ ನಡುವೆ ಪರಸ್ಪರ ಸಹಾಯ, ಸಹಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಇಂತಹ ಪ್ರಯತ್ನಗಳು ಇನ್ನಷ್ಟು ಮುಂದುವರಿಯಬೇಕು ಎಂದು ಹೇಳಿದರು.

### ❑ ಉಪನ್ಯಾಸಕರಿಂದ ಉತ್ಸಾಹಭರಿತ ಭಾಗವಹಿಸುವಿಕೆ

ಸಿಂಧನೂರು ಹಾಗೂ ಸುತ್ತಮುತ್ತಲಿನ ವಿವಿಧ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಕ್ರಿಕೆಟ್ ಲೀಗ್‌ನಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿಯೂ ವಿವಿಧ ಕಾಲೇಜುಗಳ ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕ್ರೀಡಾಕೂಟಕ್ಕೆ ಶುಭ ಹಾರೈಸಿದರು.ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಜವಾಬ್ದಾರಿ ಹೊತ್ತಿರುವ ಉಪನ್ಯಾಸಕರು ಕ್ರೀಡಾ ಮೈದಾನದಲ್ಲಿಯೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಸಜ್ಜಾಗಿರುವುದು ವಿಶೇಷವಾಗಿತ್ತು. ಉಪನ್ಯಾಸಕರಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಹೊರತರುವುದರ ಜೊತೆಗೆ, ಪರಸ್ಪರ ಆತ್ಮೀಯತೆ ಬೆಳೆಸುವಲ್ಲಿ ಈ ಲೀಗ್ ಮಹತ್ವದ ಪಾತ್ರ ವಹಿಸಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.





### ❑ 

ಐದು ಬಲಿಷ್ಠ ತಂಡಗಳ ನಡುವೆ ಪೈಪೋಟಿ ಸಿಂಧನೂರು ಉಪನ್ಯಾಸಕರ ಕ್ರಿಕೆಟ್ ಲೀಗ್ ಸೀಸನ್–4ರಲ್ಲಿ ಒಟ್ಟು ಐದು ತಂಡಗಳು ಭಾಗವಹಿಸುತ್ತಿದ್ದು, ಕ್ರೀಡಾಭಿಮಾನಿಗಳಲ್ಲಿ ಹಾಗೂ ಉಪನ್ಯಾಸಕರಲ್ಲಿ ಈಗಾಗಲೇ ಕುತೂಹಲ ಮೂಡಿಸಿದೆ. ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವ ತಂಡಗಳು:

* ಎಕ್ಸಲೆಂಟ್ ರೈಡರ್ಸ್
* ಶ್ರೀ ಕನಕದಾಸ ಬಿಗ್ ಬುಲ್ ಕಿಂಗ್ಸ್
* ಅನಿಕೇತನ ಚಾಲೆಂಜರ್ಸ್
* ಸ್ವಾಮಿ ವಿವೇಕಾನಂದ ಲಯನ್ಸ್
* ಶಂಕರ್ ಟ್ರಸ್ಟ್ ಸ್ಟೈಕರ್ಸ್

ಐದು ತಂಡಗಳ ಆಟಗಾರರು ಉತ್ತಮ ಪ್ರದರ್ಶನ ನೀಡುವ ಉತ್ಸಾಹದಲ್ಲಿದ್ದು, ಲೀಗ್‌ನ ಪ್ರತಿಯೊಂದು ಪಂದ್ಯವೂ ರೋಚಕವಾಗಿರಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

### ❑ ಕ್ರೀಡೆ ಹಾಗೂ ಸಾಮಾಜಿಕ ಸೇವೆಗೆ ಒಂದೇ ವೇದಿಕೆ

ಉಪನ್ಯಾಸಕರ ಕ್ರಿಕೆಟ್ ಲೀಗ್ ಸೀಸನ್–4 ಕೇವಲ ಮನರಂಜನೆಗಾಗಿ ಆಯೋಜಿಸಿರುವ ಕ್ರೀಡಾಕೂಟವಾಗಿರದೆ, ಸ್ನೇಹ, ಒಗ್ಗಟ್ಟು, ತಂಡದ ಮನೋಭಾವ ಹಾಗೂ ಸಾಮಾಜಿಕ ಕಳಕಳಿಯನ್ನು ಬೆಳೆಸುವ ಉದ್ದೇಶ ಹೊಂದಿದೆ.ಶಿಕ್ಷಣ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರಿಗೆ ತಮ್ಮ ಸಹೋದ್ಯೋಗಿಗಳೊಂದಿಗೆ ಬೆರೆಯಲು, ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸಲು ಹಾಗೂ ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಲು ಈ ಲೀಗ್ ಉತ್ತಮ ಅವಕಾಶ ಕಲ್ಪಿಸಿದೆ.ಕಾರ್ಯಕ್ರಮದಲ್ಲಿ ಶ್ರೀ ಬಸನಗೌಡ ಬಾದರ್ಲಿ, ಶ್ರೀ ವೆಂಕಟರಾವ್ ನಾಡಗೌಡ, ಶ್ರೀ ಎಂ. ದೊಡ್ಡಬಸವರಾಜ, ಶ್ರೀ ವೆಂಕಟ್ ನಾರಾಯಣ್, ಶಿವರಾಜ್ ಪಾಟೀಲ್, ಆರ್.ಸಿ ಪಾಟೀಲ್,ಶ್ರೀ ವೆಂಕಟ್ರಾವ್, ಶ್ರೀ ಮೊಹಮ್ಮದ್, ಶ್ರೀ ಅಮರೇಶ್, ಅಲಬನೂರು, ಅಶುಪಾಶ್, ಸುರೇಶ್ ಯಾದವ್ ಸೇರಿದಂತೆ ಗಣ್ಯರು, ವಿವಿಧ ಕಾಲೇಜುಗಳ ಉಪನ್ಯಾಸಕರು, ಆಯೋಜಕರು, ಕ್ರೀಡಾಭಿಮಾನಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.ಒಟ್ಟಾರೆ, ಉಪನ್ಯಾಸಕರ ಕ್ರೀಡಾ ಪ್ರತಿಭೆಗೆ ವೇದಿಕೆ ಕಲ್ಪಿಸುವುದರ ಜೊತೆಗೆ ಸಮಾಜಮುಖಿ ಚಿಂತನೆಗೆ ಆದ್ಯತೆ ನೀಡಿರುವ ಸಿಂಧನೂರು ಉಪನ್ಯಾಸಕರ ಕ್ರಿಕೆಟ್ ಲೀಗ್ ಸೀಸನ್–4 ಅದ್ದೂರಿಯಾಗಿ ಆರಂಭಗೊಂಡಿದ್ದು, ಮುಂದಿನ ಪಂದ್ಯಗಳಿಗಾಗಿ ಉಪನ್ಯಾಸಕರು ಹಾಗೂ ಕ್ರೀಡಾಭಿಮಾನಿಗಳಲ್ಲಿ ಭಾರೀ ನಿರೀಕ್ಷೆ ಮೂಡಿಸಿದೆ.

# ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಅಯೋಧಿ ಹರೀಷ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಪಟ್ಟಣದ ಮಾರುತಿ ನಗರ ನಾಯ್ಯಾಲಯದಲ್ಲಿ ಕಂಪ್ಲಿ ತಾಲೂಕು ವಕೀಲರ ಸಂಘದ ಸಭೆ ಶನಿವಾರ ನಡೆಯಿತು.ಈ ಸಭೆಯಲ್ಲಿ ತಾಲೂಕು ವಕೀಲರ ಸಂಘದ ನೂತನ ಪಧಾದಿಕಾ-ರಿಗಳನ್ನು ಆಯ್ಕೆ ಮಾಡಲಾಯಿತು. ತಾಲೂಕು ವಕೀಲ ಸಂಘದ ನೂತನ ಅಧ್ಯಕ್ಷರಾಗಿ ಅಯೋಧಿ ಹರೀಷ, ಉಪಾಧ್ಯಕ್ಷರಾಗಿ ಕೆ.ಎಚ್.ಹುಲುಗಣ್ಣ, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಶಿವಪ್ಪ, ಜಂಟಿ ಕಾರ್ಯದರ್ಶಿಯಾಗಿ ಎನ್.ಮಾರುತಿ, ಖಜಾಂಚಿಯಾಗಿ ವಿಜಯಲಕ್ಷ್ಮೀ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜಿ.ಪ್ರಕಾಶ, ಜಿ.ಮಾರುತಿಸಿಂಗ್, ಕೆ.ನಾಗರಾಜ, ಕೆ.ಸಿ.ಶರಣಪ್ಪ, ತುಳಿಸಿ, ಎಸ್.ನಟರಾಜ, ಮನೋಜ-ಕುಮಾರ ದಾನಪ್ಪ, ಟಿ.ಜಗದೀಶ, ಕೆ.ಶಾಂತಕುಮಾರ ಸರ್ವಾನುಮತದಿಂದ ಆಯ್ಕೆಗೊಂಡರು. ನಂತರ ಹೂವಿನ ಹಾರದೊಂದಿಗೆ ನೂತನ ಪದಾಧಿಕಾರಿಗಳು, ಸದಸ್ಯರನ್ನು ಗೌರವಿಸಲಾಯಿತು. ವರದಿ : ಜಿಲಾನಸಾಬ್ ಬಡಿಗೇರ್

# ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಜನತೆಗೆ ನಿರಂತರ ಜಾಗೃತಿ ನೀಡೋಣ: ಡಾ ನಂದಿತಾ ಎಮ್ ಎನ್

❑ ನೈಜ್ಯ ದೆಸೆ ನ್ಯೂಸ್

ರಾಯಚೂರು,:ಸೋಂಕೀತ ಸೊಳ್ಳೆಗಳ ಕಚ್ಚುವಿಕೆಯಿಂದ, ಹರಡುವ ಮಲೇರಿಯ, ಡೆಂಗ್ಯು, ಚಿಕುನ್‌ಗುನ್ಯಾ, ಆನೆಕಾಲು, ಮೆದುಳುಜ್ವರದಂತಹ ಸಾಂಕ್ರಾಮಿಕ ಖಾಯಿಲೆಗಳ ತಡೆಯಲು ಅಗತ್ಯ ಮುಂಜಾಗ್ರತೆಗಳ ಬಗ್ಗೆ ಜನತೆಗೆ ನಿರಂತರವಾಗಿ ಜಾಗೃತಿ ನೀಡುವುದು ಅಗತ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾ-ರಿಗಳ ಕಾರ್ಯಾಲಯದ ಕೃಷ್ಣಾ ಸಭಾಂಗಣದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ, ಜಿಲ್ಲಾ ಸರ್ವೇಕ್ಷಣಾ ಘಟಕದ ಸಂಯೋಗದೊಂದಿಗೆ ವಿಶ್ವ ಸೊಳ್ಳೆದಿನ ಹಾಗೂ ಋತುಮಾನದ ಜ್ವರದ ಅಂಗವಾಗಿ ಪ್ರತಿಜ್ಞೆ ಹಾಗೂ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಮಳೆಗಾಲದ ಹಿನ್ನಲೆ ಮನೆಯ ಸುತ್ತಲು ನೀರು ನಿಲ್ಲುವ ಸ್ಥಳಗಳಲ್ಲಿ ಹಾಗೂ ಮನೆಯ ಹೊರಭಾಗದಲ್ಲಿ ನೀರು ಸಂಗ್ರಹಿಸುವ ಪರಿಕರಗಳಲ್ಲಿ ಹಾಗೂ ಮನೆ ಮುಂದಿನ ಚರಂಡಿಗಳಲ್ಲಿ ಕಸಕಡ್ಡಿ ಹಾಕುವುದ-ರಿಂನೀರು ನಿಂತು ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುವಿಕೆ ಸಾಧ್ಯತೆ ಇದೆ. *ಡ್ರೈ ಡೇ:*ನೀರು ಸರಬುರಾಜು ಮಾಡುವ ಹಿಂದಿನ ದಿನವನ್ನು 'ಡ್ರೈ ಡೇ' (ಒಣ ದಿನ) ಅನುಸರಿಸಿ, ಮುಖ್ಯವಾಗಿ ನೀರು ತುಂಬುವ ಪರಿಕರಗಳನ್ನು ಸ್ವಚ್ಚಗೊಳಿಸಿದ ಬಳಿಕವಷ್ಟೇವ ಡ್ರಮ್, ಬ್ಯಾರಲ್, ತೊಟ್ಟಿ, ಮುಂತಾದವುಗಳಲ್ಲಿ ನೀರು ತುಂಬಲು ಹಾಗೂ ಸರಿಯಾಗಿ ಮುಚ್ಚಳ ಮುಚ್ಚಲು ಸಾರ್ವಜನಿಕರಿಗೆ ಜಾಗೃತಿ ನೀಡಬೇಕು.ಮನೆಯ



ಸುತ್ತಲು ನೀರು ನಿಲ್ಲದಂತೆ ನಿಗಾ* ಸೊಳ್ಳೆ ಉತ್ಪತ್ತಿ ಕಂಡುಬರುವ ತೆಂಗಿನ ಚಿಪ್ಪು, ಪ್ಲಾಸ್ಟಿಕ್ ಕಪ್, ಟಿನ್, ಟೈರ್ ಹಾಗೂ ಇತರೆ ತ್ಯಾಜ್ಯಗಳನ್ನು ವಿಲೇವಾರಿ ಮಾಡಸಲು ತಿಳಿಸಬೇಕು.*ಸಮುದಾಯ ಸಭೆ ಮತ್ತು ಸೊಳ್ಳೆ ನಿಯಂತ್ರಣ:*ಗ್ರಾಮಸ್ಥರ ಹಾಗೂ ಸಮುದಾಯ ಸಭೆ ನಡೆಸಿ, ಸಂಜೆ ಬೇವಿನಸೊಪ್ಪಿನ ಹೊಗೆ, ಮಲಗುವಾಗ ಸೊಳ್ಳೆ ಪರದೆ ಬಳಕೆ, ಲಾರ್ವಾಹಾರಿ ಗಪ್ಪಿ ಗಂಬೊಷಿಯಾ ಮೀನುಗಳನ್ನು ಶಾಶ್ವತ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಇಲಾಖೆಗೆ ಸಂಪರ್ಕಿಸಲು ತಿಳಿಸುವುದು.*ಮನೆಯೊಳಗೆ ಕೀಟನಾಶಕ ಸಿಂಪರಣೆ ಹಾಗೂ ಧೂಮೀಕರಣಕ್ಕೆ ಕ್ರಮ:*ಮಲೇರಿಯಾ ಬಾಧೀತ ಗ್ರಾಮಗಳಲ್ಲಿ ಮನೆ ಒಳಗೆ ಕ್ರಿಮಿನಾಶಕ ಸಿಂಪರಣೆ, ಡೆಂಗ್ಯು ಪ್ರಕರಣಗಳ ಕಂಡು ಬಂದಾಗ ಮನೆ ಒಳಗೆ ಧೂಮೀಕರಣಕ್ಕೆ ಹಾಗೂ ವಲಸೆ ಸ್ಥಳಗಳಲ್ಲಿ ಆನೆಕಾಲು ರೋಗ ತಡೆಗೆ ರಾತ್ರಿ ವೇಳೆ ರಕ್ತಲೇಪನ ಕಾರ್ಯಕ್ಕೆ ಜನರ ಸಹಕಾರಕ್ಕೆ ತಿಳಿಸಬೇಕು ಎಂದರು. *ಋತುಮಾನದ ಜ್ವರ ನಿಯಂತ್ರಣಕ್ಕೆ ಜಾಗೃತಿ*ಇದೇ ವೇಳೆ ಋತುಮಾನದ ಜ್ವರ ಕುರಿತು ಮಾಹಿತಿ ನೀಡುತ್ತಾ, ಯಾರಿಗಾದರೂ ಶೀತ, ನೆಗಡಿ, ಜ್ವರ, ಕೆಮ್ಮು, ಕಂಡುಬಂದಲ್ಲಿ ದಯವಿಟ್ಟು ಈ ಕ್ರಮಗಳನ್ನು ಅನುಸರಿಸಲು ಸೂಚಿಸಿದರು*ಮಾಡಬೇಕಾದ್ದು* ಸೀನುವಾಗ ಮತ್ತು ಕೆಮ್ಮುವಾಗ ಮೂಗು ಮತ್ತು ಬಾಯಿಯನ್ನು ಕರವಸ್ತ್ರದಿಂದ ಮುಚ್ಚಿಕೊಳ್ಳಬೇಕು.ಸೋಪು ಮತ್ತು ನೀರಿನಿಂದ ಕೈಗಳನ್ನು ನಿಯಮಿತವಾಗಿ ತೊಳೆಯಬೇಕು.ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಸೇವಿಸಬೇಕು.ರೋಗಲಕ್ಷಣಗಳಿರುವ ವ್ಯಕ್ತಿಗಳು ಇತರ-ರಿಂದ ಪ್ರತ್ಯೇಕವಾಗಿರುವುದು ಹಾಗೂ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ.ಸಾರ್ವಜನಿಕ ಸ್ಥಳಗಳಲ್ಲಿ ತಪ್ಪದೆ ಮಾಸ್ಕ್ ಧ-ರಿಸುವುದು*ಮಾಡಬಾರದ್ದು:* ಕಣ್ಣು, ಮೂಗು ಮತ್ತಬಾಯಿಯನ್ನು ಕೈಗಳಿಂದ ಪದೇಪದೇ ಮುಟ್ಟಬಾರದು.ಸ್ವಯಂ–ಔಷಧೋಪಚಾರ ಮಾಡಬಾರದು.ರೋಗಲಕ್ಷಣಗಳಿರುವ ಸಂದರ್ಭದಲ್ಲಿ ಕೈಕುಲುಕುವುದನ್ನು ತಪ್ಪಿಸಬೇಕು.ರೋಗ ಲಕ್ಷಣಗಳಿರುವಾಗ ಜನಸಂದಣಿ ಇರುವ ಸ್ಥಳಗಳಿಗೆ ತೆರಳಬಾರದು.ಬಳಸಿದ ಕರವಸ್ತ್ರ/ನ್ಯಾಪ್ಕಿನ್‌ಗಳನ್ನು ಮರುಬಳಕೆ ಮಾಡಬಾರದು. ಇನ್‌ಫ್ಲುಯೆಂಜಾ ಸಂಬಂಧಿತ ರೋಗಲಕ್ಷಣಗಳು ಕಂಡುಬಂದಲ್ಲಿ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ವೈದ್ಯಕೀಯ ಸಲಹೆ ಪಡೆಯುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲು ಸೂಚಿಸಿದರು. ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ ಚಂದ್ರಶೇಖರಯ್ಯ, ಜಿಲ್ಲಾಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ, ಮಾತನಾಡಿದರು.ಈ ಸಂದರ್ಭದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ ಸತೀಶ್ ಕೆ, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ಮಲೇರಿಯಾ ವಿಭಾಗದ ತಾಯಪ್ಪ, ಅಶೋಕ ಪಾಟೀಲ್, ಅಡಿವೆಪ್ಪ, ಮಹೇಶ್, ಎಪಡಮಲಾಜಿಸ್ಟ್ ಶ್ರೀನಿವಾಸ್, ಸೂಗುರಪ್ಪ, ಸುರೇಶ್ ಬಂಡಾರಿ, ಎಮ್‌ಟಿಎಸ್ ಸಂಧ್ಯಾ, ಸಿಬ್ಬಂದಿಯವರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾ-ರಿಗಳು, ಪ್ರಯೋಗಾಲಯ ತಂತ್ರಜ್ಞರು, ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಭೂರಮೆ

ಹೇ ತಾಯಿಯೇ!..
ಭೂ ಮಾತೆಯೇ!..
ನಮ್ಮಾ ಜೀವಧಾತ್ರಿಯೇ!..
ನಮ್ಮಾ ಜೀವಧಾತ್ರಿಯೇ!..

ಎಂಥಾ ವಿಸ್ಮಯ ನಿನ್ನಯ ಒಡಲು!
ಜೀವಕ್ಕಾಸರೆ ನಿನ್ನಯ ಮಡಿಲು!
ತುಂಬಿ ತುಳುಕುತ್ತಿದೆ ನಿನ್ನೊಳು,
ಅಮೃತದಾ, ಸವಿಜೇನ ಕಡಲು.

ಗಿರಿ–ಪರ್ವತಗಳ ಸೃಷ್ಟಿಸಿರುವೆ,
ಸಾಹಸಿಗಳ ನಿದ್ದೆಗೆಡಿಸಿರುವೆ;
ಹಚ್ಚ–ಹಸಿರ ಹರಡಿರುವೆ,
ಸೌಂದರ್ಯವ ನೀ ಸೂಸಿರುವೆ!

ಜಲವ ಹೊತ್ತು ನಿಂತಿರುವೆ,
ಜೀವಿಗಳ ಜೀವ ಹಿಡಿದಿರುವೆ;
ಜಲಪಾತದ ಸೊಬಗ ಕರುಣಿಸಿ
ಜನಮನವ ನೀ ತಣಿಸಿರುವೆ.

ಹಸಿರ ನೀನು ಹೊದ್ದಿರಲು,
ಜೀವಿಗಳ ಉಸಿರು ಸಾಗುತಿಹುದು;
ಜೀವ ನೀಡುವ ಮಣ್ಣಿರಲು,
ಸಕಲ ಬದುಕು ಸಾಗುತಿಹುದು.

ಕುದಿಯುವ ಜ್ವಾಲಾಗ್ನಿ ನಿನ್ನೊಳಿದ್ದರೂ,
ಶಾಂತ ಸ್ವರೂಪಿಣಿ ನೀನು.
ಬಿರುಗಾಳಿ, ಭೂಕಂಪ ಭುಗಿಲೆದ್ದರೂ,
ಸಹನಾಮೂರ್ತಿ ತಾಯೆ ನೀನು.

ನಿನ್ನ ಗರ್ಭದಿ ಅವಿತ ಖನಿಜಗಳಿಂದ,
ಅರಳಿವೆ ಮನುಜರ ಮನಗಳು;
ಹೆಕ್ಕಿ ತೆಗೆದು ಸಿದ್ಧಗೊಳಿಸಲು,
ಉರುಳುತ್ತಿವೆ ಬಾಳಿನ ದಿನಗಳು.

ಪಂಚಭೂತಗಳ ನೀ ಕರುಣಿಸಿ,
ಪ್ರಾಣವು ನೆಲೆಸಲು ಕಾರಣಳಾದೆ;
ಸಕಲ ಜೀವರಾಶಿಯ ಬದುಕಿಸಿ,
ಪ್ರತ್ಯಕ್ಷ ದೇವತೆ ನೀನಾದೆ!

**ಡಾ ಮಹೇಂದ್ರ ಕುರ್ಡಿ**

## ಸತ್ಸಂಗಗಳಿಂದ ಜೀವನದಲ್ಲಿ ಸಂಸ್ಕಾರ ಸಾಧ್ಯ: ಶಿಕ್ಷಕ ಎಸ್. ರಾಮಪ್ಪ ಕರೆ

❑ ನೈಜ್ಯ ದೆಸೆ ನ್ಯೂಸ್



ಕೊಪ್ಪಳ / ಗಂಗಾವತಿ : "ಮನುಷ್ಯನು ತನ್ನ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡದೆ, ಸತ್ಸಂಗದಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಸಂಸ್ಕಾರವಂತನಾಗಬೇಕು" ಎಂದು ಎಮ್ಮಿಗನೂರು ಸರ್ಕಾರಿ ಶತಮಾನ ಶಾಲೆಯ ಅತಿಥಿ ಶಿಕ್ಷಕ ಹಾಗೂ ನಿರೂಪಕ ಎಸ್. ರಾಮಪ್ಪ ಅವರು ತಿಳಿಸಿದರು.ನಗರದ ಬಸವಪರ ಸಂಘಟನೆಗಳ ವತಿಯಿಂದ ಶನಿವಾರ ಶ್ರೀಮತಿ ರಾಜೇಶ್ವರಿ ಸುರೇಶ್ ದಂಪತಿಗಳ ಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ "ಮನೆ ಮನೆಗಳಿಂದ ಮನ ಮನಗಳಿಗೆ ವಚನ ಸಂದೇಶ" ಸಾರುವ 'ವಚನ ಶ್ರಾವಣ' ಕಾರ್ಯಕ್ರಮದಲ್ಲಿ ಅವರು ಮುಖ್ಯ ಉಪನ್ಯಾಸ ನೀಡಿದರು.ಕಾರ್ಯಕ್ರಮದಲ್ಲಿ ಶರಣ ಅಂಬಿಗರ ಚೌಡಯ್ಯನವರ ಜೀವನ ವೃತ್ತಾಂತವನ್ನು ಪರಿಚಯಿಸಿದ ಅವರು,"ಮಾನವನು ತನ್ನ ತನು, ಮನ ಹಾಗೂ ಧನವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸುವ ಮೂಲಕ ಬದುಕಿನಲ್ಲಿ ನಿಜವಾದ ಸಾರ್ಥಕತೆಯನ್ನು ಪಡೆದುಕೊಳ್ಳಲು ಸಾಧ್ಯ" ಎಂದು ವಚನ ನಿರ್ವಚನ ನೀಡಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಶಂಕರ ಕುಮಾರಿ, ಪಂಪಣ್ಣ, ದಿಲೀಪ್ ಕುಮಾರ್, ಬಸವರಾಜ್, ಮಹೇಶ್ ಕುಮಾರ್, ರಾಜೇಶ್ವರಿ ಸುರೇಶ್, ಜೀರ್ ಲೋಕೇಶ್ ಸೇ–ರಿದಂತೆ ಬಸವಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.ವರದಿ : ಜಿಲಾನಸಾಬ್ ಬಡಿಗೇರ್

# ಅನುದಾನ ಬಿಡುಗಡೆಗೊಳಿಸಲು ಸಚಿವ ಜಾರಕಿಹೊಳಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮುದ್ದೇಬಿಹಾಳ ಮತಕ್ಷೇತ್ರ ತಾಳಿಕೋಟಿ ತಾಲೂಕಿನ ವ್ಯಾಪ್ತಿಗೆ ಬರುವ ಕೊಣ್ಣೂರ ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿಗಾಗಿ 200 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಲು ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಇವರಿಗೆ ಅಸ್ಕಿ ಫೌಂಡೇಶನ್ ಕೊಣ್ಣೂರ ಅಧ್ಯಕ್ಷ ಸಿ. ಬಿ. ಅಸ್ಕಿ ಇವರ ನೇತೃತ್ವದಲ್ಲಿ ಗ್ರಾಮಸ್ಥರು ಮನವಿ ಸಲ್ಲಿಸಿದರು. ಭಾನುವಾರ ವಿಜಯಪುರ ಜಿಲ್ಲಾ ಗುತ್ತಿಗೆದಾರರ ಸಂಘದ ನೂತನ ಕಟ್ಟಡ ಭೂಮಿ ಪೂಜೆ ಸಮಾರಂಭಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರಿಗೆ ಈ ಮನವಿಯನ್ನು ನೀಡಲಾಯಿತು. ಕೊಣ್ಣೂರ ಸುಮಾರು ಹತ್ತು ಸಾವಿರ ಜನಸಂಖ್ಯೆಯಿಂದ ಕೂಡಿದ ಗ್ರಾಮವಾಗಿದ್ದು ಸುಸಜ್ಜಿತವಾದ ರಸ್ತೆ ಚರಂಡಿಗಳ ವ್ಯವಸ್ಥೆ ಇಲ್ಲದೆ




ಇರುವುದರಿಂದ ಮಳೆಗಾಲದಲ್ಲಿ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತಿದೆ. ಅದರಲ್ಲಿಯೂ ಸರ್ಕಾರಿ ಆಸ್ಪತ್ರೆ ಹತ್ತಿರದ ಬಡಾವಣೆಯಲ್ಲಿ ವಾಸಿಸುವರ ಸಂಖ್ಯೆ ಹೆಚ್ಚಾಗಿದ್ದು ಇಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ಆದ್ದರಿಂದ ಆದಷ್ಟು ಬೇಗ ಅನುದಾನವನ್ನು ಬಿಡುಗಡೆಗೊಳಿಸಬೇಕೆಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ. ಇದೇ ಸಂದರ್ಭದಲ್ಲಿ ಗ್ರಾಮಸ್ಥರು ವತಿಯಿಂದ ಸಚಿವ ಸತೀಶ್ ಜಾರಕಿಹೊಳಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.ಈ ಸಮಯದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಶರಣಯ್ಯ ಹಿರೇಮಠ, ಅಸ್ಕಿ ಫೌಂಡೇಶನ್ ಕೊಣ್ಣೂರ ಅಧ್ಯಕ್ಷ ಸಿ.ಬಿ.ಅಸ್ಕಿ, ರಹೆಮಾನಸಾಬ ಅವಟಿ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಪ್ರತಿನಿಧಿ ಯಲ್ಲಪ್ಪ ಮಾದರ, ಅಸ್ಕಿ ಫೌಂಡೇಶನ್ ಉಪಾಧ್ಯಕ್ಷ ವೀರೇಶಗೌಡ ಅಸ್ಕಿ,ಶಾಂತಗೌಡ ಹಡಲಗೇರಿ,ರಾಮಣ್ಣ ಮಣೂರ, ದಾವಲಸಾಬ ಮಡಿಕೇಶ್ವರ, ಇಮ್ರಾನ್ ಟಕ್ಕಳಕಿ,ಸಂಗನಗೌಡ ಬಿರಾದಾರ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಯುವಕರು ಉಪಸ್ಥಿತರಿದ್ದರು.

# ಅಕ್ಸಾ ಮಸೀದಿಯಲ್ಲಿ ಜಮಿಯಾತ್–ಎ–ಉಲ್ಮಾ ಲಿಂಗಸೂಗೂರ ಸಂಘಟನೆಯಿಂದ ಸೀರತ್ ಪ್ರಶ್ನಾವಳಿ ಸ್ಪರ್ಧೆ – ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು:ಸ್ಥಳೀಯ ಅಕ್ಸಾ ಮಸೀದಿಯಲ್ಲಿ ಜಮಿಯಾತ್–ಎ–ಉಲ್ಮಾ ಲಿಂಗಸೂಗೂರು ಸಂಘಟನೆಯ ನೇತೃತ್ವದಲ್ಲಿ ಲಿಂಗಸೂಗೂರು ತಾಲೂಕಿನ ವಿವಿಧ 20 ಹಳ್ಳಿಗಳ ಮಕ್ತಬ್‌ಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಹಜರತ್ ಮೊಹಮ್ಮದ್ ಪೈಗಂಬರ್ ರವರ ಪವಿತ್ರ ಸೀರತ್ (ಜೀವನಚರಿತ್ರೆ) ಆಧಾರಿತ ಪ್ರಶ್ನಾವಳಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.ಈ ರಸಪ್ರಶ್ನೆ ಸ್ಪರ್ಧೆಯಲ್ಲಿ 20 ಗ್ರಾಮಗಳ ಮಕ್ತಬ್‌ಗಳಿಂದ ಆಗಮಿಸಿದ್ದ ಸುಮಾರು 120ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಅತ್ಯುತ್ತಮ ಸಾಧನೆ ತೋರಿ



ವಿಜೇತರಾದ ಎಲ್ಲಾ ವಿದ್ಯಾರ್ಥಿಗಳಿಗೆ ಜಮಿಯಾತ್–ಎ–ಉಲ್ಮಾ ಲಿಂಗಸೂಗೂರು ಸಂಘಟನೆಯ ವತಿಯಿಂದ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಮಿಯಾತ್–ಎ–ಉಲ್ಮಾ ತಾಲೂಕು ಅಧ್ಯಕ್ಷ ಮೌಲಾನ ಫಜಲ್ ಎ ಕರೀಂ ಅವರು, "ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ಅವರ ಸೀರತ್ (ದಿವ್ಯ ಜೀವನಚರಿತ್ರೆ) ವಿದ್ಯಾರ್ಥಿಗಳ ಬದುಕಿಗೆ ದಾ–ರಿದೀಪವಾಗಿದೆ. ಪೈಗಂಬರರ ತತ್ತ್ವ, ಸಂದೇಶ ಹಾಗೂ ಮಾನವೀಯ ಮೌಲ್ಯಗಳನ್ನು ಮಕ್ಕಳು ಚಿಕ್ಕಂದಿನಿಂದಲೇ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಕ್ತಬ್‌ಗಳ ಮುಖಾಂತರ ಧಾರ್ಮಿಕ ಅರಿವಿನ ಜೊತೆಗೆ ಉತ್ತಮ ಸಂಸ್ಕಾರ ಬೆಳೆಸುವುದು ಇಂದಿನ ಅಗತ್ಯವಾಗಿದೆ," ಎಂದು ಹೇಳಿದರು.ಈ ಸಂದರ್ಭದಲ್ಲಿ ಹಾಫಿಜ್ ಅಲ್ಲಾಉದ್ದಿನ್ ಸಾಬ್, ಮೌಲಾನ ಮಜರ್ ಖಾಲಿದ್ ಸಾಬ್, ಹಾಫಿಜ್ ರಜಾಕ್ ಸಾಬ್, ಹಾಫಿಜ್ ಗುಲಾಮ್ ಸಾಬ್, ಹಾಫಿಜ್ ಮತಿನ್ ಸಾಬ್, ಜನಾಬ್ ವಸಿಂ ಪಾಷಾ, ಡಾ. ಜಾವಿದ್, ಮೌಲಾ ಸಾಬ್, ಮಹೇಬೂಬ್ ಸಾಬ್ (ಜೆಇ) ಸೇರಿದಂತೆ ಹಲವು ಮುಖಂಡರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹಾಕಿ ಮಾಂತ್ರಿಕ ಧ್ಯಾನಚಂದ್ ಅವರ ಜನ್ಮದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಎಸ್. ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಎಚ್.ಎಸ್.ಪಾಟೀಲ ದೈಹಿಕ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಹಾಕಿ ಮಾಂತ್ರಿಕ ದ್ಯಾನಚಂದರ ದಿನಾಚರಣೆಯನ್ನು ಶನಿವಾರ ಆಚರಿಸಲಾಯಿತು.ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎ□□□ಸ್ ಪಾಟೀಲರು ಧ್ಯಾನಚಂದ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ಮೇಜರ್ ಧ್ಯಾನ್ ಚಂದ್



ಅವರನ್ನು ಭಾರತದ ಸಾರ್ವಕಾಲಿಕ ಶ್ರೇಷ್ಠ ಹಾಕಿ ಆಟಗಾರ ಹಾಗೂ "ಹಾಕಿ ಮಾಂತ್ರಿಕ" ಎಂದು ಕರೆಯಲಾಗುತ್ತದೆ. ಇವರು ಕ್ರೀಡಾ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಭಾರತ ಸರ್ಕಾರವು ಇವರನ್ನು 1956 ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಅವರ ಜನ್ಮ ದಿನವಾದ ಆಗಸ್ಟ್ 29,"ರಾಷ್ಟ್ರೀಯ ಕ್ರೀಡಾ ದಿನ"ವನ್ನಾಗಿಆಚರಿಸಲಾಗುತ್ತದೆ ಎಂದರು.ಈ ಸಮಯದಲ್ಲಿ ಸಂಸ್ಥೆಯ ಕಾರ್ಯದರ್ಶಿ ಸಚೀನ ಎಚ್.ಪಾಟೀಲ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಾದ ಡಾ.ಎಮ್. ಎಮ್.ಬೆಳಗಲ್ಲ, ದೈಹಿಕ ಶಿಕ್ಷಣ ಮಹಾವಿದ್ಯಾಲಯ ದ ಪ್ರಾಚಾರ್ಯ ಶಿವಕುಮಾರನಾಯಕ,ಪಿಯು ವಿಭಾಗದ ಎಸ್.ಬಿ.ಮಂಗ್ಯಾಳ, ಪ್ರಕಾಶ ವಾಲೀಕಾರ, ಶ್ರೀನಿವಾಸ ಬಸಂತಾಪೂರ,ಪ್ರೌಢಶಾಲೆಯ ಎಮ್.ಎಸ್.ರಾಯಗೊಂಡ, ಮತ್ತು ಬಿಪಿಇಡಿ ಪ್ರಶಿಕ್ಷಾರ್ಥಿಗಳು ಹಾಜರಿದ್ದರು.

## ಸಿಂಧನೂರು ಕೆ.ಕೆ.ಆರ್.ಟಿ.ಸಿ. ಘಟಕದಲ್ಲಿ ಯಶಸ್ವಿಯಾಗಿ ನೆರವೇರಿದ ಉಚಿತ 'ವಿಶೇಷ ಆಯುಷ್ ಶಿಬಿರ'

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು (ಆಗಸ್ಟ್ 29, 2026): ಜಿಲ್ಲಾ ಆಯುಷ್ ಇಲಾಖೆ ರಾಯಚೂರು ಹಾಗೂ ಸರಕಾರಿ ಯುನಾನಿ ಚಿಕಿತ್ಸಾಲಯ ಸಿಂಧನೂರು ಇವರ ಜಂಟಿ ಆಶ್ರಯದಲ್ಲಿ, ರಾಷ್ಟ್ರೀಯ ಆಯುಷ್ ಅಭಿಯಾನ (2026–27) ಯೋಜನೆಯಡಿ ಸ್ಥಳೀಯ ಕೆ.ಕೆ.ಆರ್.ಟಿ.ಸಿ. (ಏಏಖಖಿಅ) ಘಟಕದಲ್ಲಿ ಉಚಿತ ವಿಶೇಷ ಆಯುಷ್ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಶನಿವಾರದಂದು ಯಶಸ್ವಿಯಾಗಿ ಆಯೋಜಿಸಲಾಯಿತು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೆ. ಕೆ.ಆರ್.ಟಿ.ಸಿ. ಘಟಕದ ವ್ಯವಸ್ಥಾಪಕರಾದ ಹೊನ್ನಪ್ಪ ಅವರು, "ಅಹೋರಾತ್ರಿ ಸಾರ್ವಜನಿಕ ಸೇವೆ ಸಲ್ಲಿಸುವ ಸಂಸ್ಥೆಯ ಚಾಲಕರು, ನಿರ್ವಾಹಕರು ಹಾಗೂ ತಾಂತ್ರಿಕ ಸಿಬ್ಬಂದಿಗಳ ಆರೋಗ್ಯ ರಕ್ಷಣೆ ಅತ್ಯಂತ ಆದ್ಯತೆಯ ವಿಷಯವಾಗಿದೆ. ನಿರಂತರ ಪ್ರಯಾಣ ಮತ್ತು ಕರ್ತವ್ಯದ ಒತ್ತಡದಿಂದ ಎದುರಾಗುವ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳನ್ನು ತಡೆಯಲು ಆಯುಷ್ ಚಿಕಿತ್ಸಾ ಪದ್ಧತಿ ಅತ್ಯಂತ ಸಹಕಾರಿ. ಇಂತಹ ಉಚಿತ ಆರೋಗ್ಯ ಶಿಬಿರಗಳ ಸೌಲಭ್ಯವನ್ನು ಪ್ರತಿಯೊಬ್ಬ ಸಿಬ್ಬಂದಿಯೂ ಪಡೆದುಕೊಳ್ಳಬೇಕು" ಎಂದು ಕರೆ ನೀಡಿದರು.ನುರಿತ ವೈದ್ಯರುಗಳಾದ ಡಾ. ಅಮ್ಜದ್ ಶರೀಫ್, ಡಾ. ಆಯಿಷಾ ತಹಸೀನ್, ಡಾ. ನಬೀ ಮೋಹಿನುದ್ದೀನ್ ಹಾಗೂ ಡಾ. ದುರುಗಪ್ಪ ಅವರು ಶಿಬಿರದಲ್ಲಿ ಪಾಲ್ಗೊಂಡ ನೌಕರರಿಗೆ ಸಮಗ್ರ ಆರೋಗ್ಯ ತಪಾಸಣೆ ನಡೆಸಿ,






ಆಯುರ್ವೇದ ಹಾಗೂಯುನಾನಿ ಪದ್ಧತಿಯಡಿ ಉಚಿತ ಸಲಹೆ ಮತ್ತು ಚಿಕಿತ್ಸೆ ನೀಡಿದರು.ಶುಶ್ರೂಷಾಧಿಕಾರಿಗಳಾದ ರಾಜಪ್ಪ ಮತ್ತು ನಿಂಗಮ್ಮ ಅವರು ಸಿಬ್ಬಂದಿಗಳಿಗೆ ಉಚಿತವಾಗಿ ರಕ್ತದೊತ್ತಡ (ಃಕ)ಹಾಗೂ ಮಧುಮೇಹ (ಆಚಿಭಜಣಭ) ತಪಾಸಣೆ ನಡೆಸಿದರು.ಫಾರ್ಮಸಿ ಅಧಿಕಾರಿಗಳಾದ ಭಾರ್ಗವ, ನಂದಕಿಶೋರ್ ಮತ್ತು ಹರ್ಷವರ್ಧನ ಅವರು ಅಗತ್ಯವಿದ್ದ ರೋಗಿಗಳಿಗೆ ಉಚಿತವಾಗಿ ಗುಣಮಟ್ಟದ ಔಷಧಗಳನ್ನು ವಿತರಿಸಿದರು.ಕಾರ್ಯಕ್ರಮದ ಸುಗಮ ನಿರ್ವಹಣೆಗೆ ಘಟಕದ ಸಿಬ್ಬಂದಿಗಳಾದ ವಿಶ್ವನಾಥ್ ಮತ್ತು ಖಲಂದರ್ ಸಂಪೂರ್ಣ ಸಹಕಾರ ನೀಡಿದರು.ದೀರ್ಘಾವಧಿ ಕುಳಿತು ಚಾಲನೆ ಮಾಡುವುದರಿಂದ ಸಾರಿಗೆ ಸಿಬ್ಬಂದಿಯಲ್ಲಿ ಹೆಚ್ಚಾಗಿ ಕಂಡುಬರುವ ಬೆನ್ನುನೋವು, ಕೀಲು ನೋವು, ಗ್ಯಾಸ್ಟ್ರಿಕ್ ಹಾಗೂ ಮಾನಸಿಕ ಒತ್ತಡದಂತಹ ಸಮಸ್ಯೆಗಳಿಗೆ ಯುನಾನಿ ಮತ್ತು ಆಯುರ್ವೇದ ಮುನ್ನೆಚ್ಚರಿಕೆ ಚಿಕಿತ್ಸೆಗಳು ಪರಿಣಾಮಕಾರಿಯಾಗಿವೆ. ಈ ಶಿಬಿರದಲ್ಲಿ ಸಂಸ್ಥೆಯ ನೂರಕ್ಕೂ ಹೆಚ್ಚು ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸಿ ಉಚಿತ ಆರೋಗ್ಯ ಸೇವೆಯ ಲಾಭ ಪಡೆದುಕೊಂಡರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ಸಮಾಜ ಕಲ್ಯಾಣ ಇಲಾಖೆ (SWD) ನೇಮಕಾತಿ 2026: ವಸತಿ ಶಾಲಾ ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ. ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 18-ಸೆಪ್ಟೆಂಬರ್-2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.ಸಂಸ್ಥೆಯ ಹೆಸರು: ಕರ್ನಾಟಕ ಸಮಾಜ ಕಲ್ಯಾಣ ಇಲಾಖೆ (SWD) ವಸತಿ ಶಾಲೆಗಳು ಹುದ್ದೆಗಳ ಸಂಖ್ಯೆ: 140 ಉದ್ಯೋಗ ಸ್ಥಳ: ಕರ್ನಾಟಕ ಹುದ್ದೆಯ ಹೆಸರು: ವಸತಿ ಶಾಲಾ ಶಿಕ್ಷಕರು ವೇತನ: ತಿಂಗಳಿಗೆ ರೂ. 41,300 – 81,800/- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18-ಸೆಪ್ಟೆಂಬರ್-2026 ಅಧಿಕೃತ ವೆಬ್‌ಸೈಟ್: cetonline.karnataka.gov.in

# ಚನ್ನಬಸವ ಸ್ವಾಮಿಯವರ ಕಾರ್ಯ ದೇವರ ಸ್ವರೂಪದಂತೆ – ಶಿವಾನಂದ ಶರ್ಮಾ ಜಿ

ನೈಜ್ಯ ದೆಸೆ ನ್ಯೂಸ್



ಸಿಂಧನೂರು – ಬಳ್ಳಾರಿ ಜಿಲ್ಲೆ ಕುರುಗೋಡು ತಾಲೂಕಿನ ಶ್ರೀ ಗುರುಕುಲ ಆಶ್ರಮದ ಪೀಠಾಧಿಪತಿಗಳಾದ ಶಿವಾನಂದ ಶರ್ಮಾಜಿ ಅವರು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್(ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಪಾದಸ್ಪರ್ಶ ಮಾಡಿ ಸಿಂಧನೂರು ತಾಲೂಕಿನ ಬಂಗಾರಿ ಕ್ಯಾಂಪ್ ನ ದಿ. ಗೊಡತಿ ಕಿರಣ್ ಅವರ ಪುಣ್ಯಾರಾಧನೆ ಸಮಾರಂಭದಲ್ಲಿ ಭಾಗವಹಿಸಿ ಆಶ್ರಯದಾತುರುಗಳ ಯೋಗ ಕ್ಷೇಮ ವಿಚಾರಿಸಿ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿದರು. ನಂತರ ಬಿಡಬ್ಲ್ಯೂಡಿ ಕ್ಯಾಂಪ್ ನಲ್ಲಿರುವ ಶ್ರೀ ಶಾಂಭವಿ ಪುಣ್ಯಾಶ್ರಮಕ್ಕೆ ವೇ.ಮೂ. ಪ್ರಭು ಸ್ವಾಮಿಗಳನ್ನು ಹಾಗೂ ವೇ ಮೂ. ವೀರೇಶ ಯಡಿಯೂರಮಠ ಇವರನ್ನು ಇವರುಗಳನ್ನು ಗೌರವಿಸಿ ಆಶೀರ್ವದಿಸಿದರು. ಭೇಟಿ ನೀಡಿ ಈ ಕಾರ್ಯಕ್ರಮದಲ್ಲಿ ಆಶ್ರಮದ ಸೇವಾಕರ್ತ ದಂಪತಿಗಳಾದ ಸುಜಾತ ಡಾ. ಚನ್ನಬಸವ ಸ್ವಾಮಿ ಹಿರೇಮಠ ಇವರುಗಳು ಶಿವಾನಂದ ಶರ್ಮಾಜಿ ಅವರಿಗೆ ವಿಶೇಷ ಪಾದ ಪೂಜೆ ಸಲ್ಲಿಸಿ ಗೌರವಿಸಿ ಆಶೀರ್ವಾದ ಸ್ವೀಕರಿಸಿದರು. ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಸಿಂಧಿಗೇರಿಯ ಶ್ರೀ ಗುರುಕುಲ ಆಶ್ರಮದ ಪೀಠಾಧಿಪತಿಗಳಾದ ವೇ. ಮೂ. ಶಿವಾನಂದ ಶರ್ಮಾಜಿ ಕಾರುಣ್ಯಾಮವನ್ನು ಸಾಮಾನ್ಯ ಬಡ ಜಂಗಮ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕನಾದ ಹರೇಟನೂರಿನ ವೇ.ಮೂ. ಅಮರಯ್ಯ ಸ್ವಾಮಿಯವರು ನಮ್ಮ ನಾಡಿನ ಅನಾಥರ ಆರಾಧ್ಯ ದೈವವಾಗಿ ಮಾಡುತ್ತಿರುವ ಈ ಕಾರ್ಯ ಭಗವಂತನ ಪೂಜೆಗಿಂತ ಮಿಗಿಲಾಗಿದೆ. ನಮ್ಮ ಚನ್ನಬಸವ ಸ್ವಾಮಿಯವರ ಕಾರ್ಯ ದೇವರ ಸ್ವರೂಪದಂತೆ ಇಂತಹ ಅಭೂತಪೂರ್ವ ಕಾರ್ಯ ಮಾಡುತ್ತಿರುವ ಈ ಆದರ್ಶ ದಂಪತಿಗಳು ಅನಾಥ ಎನ್ನುವ ಪದವನ್ನು ಅಳಿಸಿ ಹಾಕಿದ್ದಾರೆ. ನಮ್ಮ ಈ ಕಾರುಣ್ಯಾಶ್ರಮವೂ ಸಂಸ್ಕೃತಿ ಸಂಸ್ಕಾರದ ವಿಶ್ವವಿದ್ಯಾಲಯವಾಗಿದೆ. ಬಂದಿರುವಂತಹ ದಾನಿಗಳಲ್ಲಿಯೂ ಕೂಡ ಹಲವಾರು ಅಭಿಯಾನಗಳ ಮೂಲಕ ಹಿರಿಯರನ್ನು ಗೌರವಿಸುವಂತಹ ಸಂದೇಶಗಳನ್ನು ನೀಡುತ್ತಿರುವುದು. ನನ್ನ ಮನಸ್ಸಿಗೆ ಬಹಳ ನೆಮ್ಮದಿ ತಂದಿದೆ. ಮುಂದಿನ ದಿನಮಾನಗಳಲ್ಲಿ ನಮ್ಮ ಆಶೀರ್ವಾದ ಸಹಾಯ ಸಹಕಾರ ನಿರಂತರವಾಗಿ ಕಾರುಣ್ಯ ಕುಟುಂಬಕ್ಕಿರುತ್ತದೆ. ನಮ್ಮ ಚನ್ನಬಸವ ಸ್ವಾಮಿಯವರ ಕಾರ್ಯ ದೇವರ ಸ್ವರೂಪದಂತೆ ಎಂದು ಮಾತನಾಡಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ನಂತರ ಸಿಂಧನೂರಿನ ಶ್ರೀ ಶಾಂಭವಿ ಪುಣ್ಯಾಶ್ರಮದ ಪೀಠಾಧಿಪತಿಗಳಾದ ವೇ.ಮೂ. ವೀರೇಶ ಯಡಿಯೂರುಮಠ ಇಂದು ನಮ್ಮ ಶಿವಾನಂದ ಶರ್ಮಾಜಿಯವರು ಕಾರುಣ್ಯಾಶ್ರಮಕ್ಕೂ ಮತ್ತು ನಮ್ಮ ಶಾಂಭವಿ ಪುಣ್ಯಾಶ್ರಮಕ್ಕೆ ಪಾದಸ್ಪರ್ಶ ಮಾಡಿರುವುದು ಬಹಳ ನಮ್ಮೆಲ್ಲರಿಗೆ ಸಂತಸದ ವಿಷಯವಾಗಿದೆ. ಮಕ್ಕಳಾದವರು ಕನಸಲ್ಲಿಯೂ ಕೂಡ ಹೆತ್ತವರನ್ನು ವೃದ್ಧಾಶ್ರಮಕ್ಕೆ ತಳ್ಳಬಾರದು ಎನ್ನುವುದು ನಮ್ಮ ಕಾರುಣ್ಯ ಆಶ್ರಮದ ಸಂಕಲ್ಪವಾಗಿದೆ. ಮತ್ತು ಆಶ್ರಮಕ್ಕೆ ಹೆತ್ತವರನ್ನು ಮಾತ್ರ ಕೊಡಬೇಡಿ ಎನ್ನುವುದು ನಮ್ಮ ಕಾರುಣ್ಯಾಶ್ರಮದ ವಿನಂತಿ ಎನ್ನುವ ಹಲವಾರು ಸಂದೇಶಗಳೊಂದಿಗೆ ಕಾರುಣ್ಯ ಕುಟುಂಬದ ಬದುಕು ಸಾಗುತ್ತಿದೆ. ನಾಡಿನ ಬಸವಾದಿ ಶರಣರ ಹರಗುರು ಚರಮೂರ್ತಿಗಳ ಆಶೀರ್ವಾದವೇ ಕಾರುಣ್ಯ ಆಶ್ರಮಕ್ಕೆ ಬಹುದೊಡ್ಡ ಶಕ್ತಿ ನಿರಂತರ ಜೋಳಿಗೆಯ ಮೂಲಕ ಜಂಗಮನಾಗಿ ಮಾಡುತ್ತಿರುವ ಈ ಕಾಯಕದಲ್ಲಿ ಅನೇಕ ಅವಮಾನಗಳು ಅಪಪ್ರಚಾರಗಳು ಟೀಕೆ ಟಿಪ್ಪಣಿಗಳು ಸರ್ವೇಸಾಮಾನ್ಯವಾಗಿದೆ. ಆದ-'ರೆ ಅದ್ಯಾವುದನ್ನು ಲೆಕ್ಕಿಸದೆ ಚನ್ನಬಸಯ್ಯ ದಂಪತಿಗಳು ಮಾಡುತ್ತಿರುವ ಈ ಕಾರ್ಯ ನಮ್ಮ ಜಂಗಮ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬಂಗಾರಿ ಕ್ಯಾಂಪಿನ ಗೊಡತಿ ಕುಟುಂಬದ ಕಾರುಣ್ಯ ಗಂ. ಭಾಸ್ಕರ ರಾವ್. ಸತ್ಯನಾರಾಯಣ. ಪ್ರಭಾವತಿ. ನವಜೀವನರಾವ್.ಸುಜಾತ. ರಕ್ಷಿತಾ ಗೀತಿಕಾ. ರಮ್ಯ. ಕಾವ್ಯ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ.ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

## ಕಂಪ್ಲಿಯಲ್ಲಿ ಪೌರಕಾರ್ಮಿಕರು, ಪೊಲೀಸರಿಗೆ ರಾಖಿ ಕಟ್ಟಿದ ಧರ್ಮಸ್ಥಳ ಯೋಜನೆ ಕಾರ್ಯಕರ್ತರು

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಒಡಹುಟ್ಟಿದವರಷ್ಟೇ ಅಣ್ಣ-ತಂಗಿಯರಲ್ಲ, ಮನಸ್ಸಿನ ಶುದ್ಧ ಭಾವನೆಯಿಂದ ಕಾಣುವ ಪ್ರತಿಯೊಬ್ಬರೂ ಒಡಹುಟ್ಟಿದವರೇ ಎಂಬ ಸಂದೇಶದೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ಪಟ್ಟಣದಲ್ಲಿ ಪವಿತ್ರ "ರಕ್ಷಾಬಂಧನ" ಕಾರ್ಯಕ್ರಮವನ್ನು ವಿನೂತನವಾಗಿ ಆಚರಿಸಲಾಯಿತು. ಪಟ್ಟಣದ ಪ್ರತಿ ಕಾಲೋನಿ ಹಾಗೂ ಗಲ್ಲಿ-ಗಲ್ಲಿಗಳನ್ನು ನಿತ್ಯ ಮುಂಜಾನೆ ಎದ್ದು ಸ್ವಚ್ಛಗೊಳಿಸಿ, ನಗರದ ಸೌಂದರ್ಯ ಕಾಪಾಡುವ ಪುರಸಭೆಯ ಪೌರಕಾರ್ಮಿಕರಿಗೆ ಹಾಗೂ ಸಾರ್ವಜನಿಕರ ರಕ್ಷಣೆಗೆ ಹಗಲಿರುಳು ಶ್ರಮಿಸುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಯೋಜನೆಯಕಾರ್ಯಕರ್ತೆಯರು ರಾಖಿ ಕಟ್ಟಿ, ಸಿಹಿ ಹಂಚಿ ಶುಭ ಹಾರೈಸಿದರು. ಈ ಪವಿತ್ರ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಜಿಲ್ಲಾ ಜನ ಜಾಗೃತಿ ವೇದಿಕೆ ಕೋಶಾಧಿಕಾರಿಗಳಾದ ವೆಂಕಟೇಶ್ ಭರಮಕ್ಕನವರ್, ತಾಲೂಕು ಯೋಜನಾಧಿಕಾರಿಗಳಾದ ರಾಘವೇಂದ್ರ ಎಲ್., ಪುರಸಭೆ ಮುಖ್ಯ ಅಧಿಕಾರಿಗಳಾದ ಮಲ್ಲಿಕಾರ್ಜುನ, ಕಂಪ್ಲಿ ಪೊಲೀಸ್ ಠಾಣೆಯ ಡಿವೈಎಸ್ಪಿ (ಆಜಖಕ) ಹಾಗೂ ಸಿಪಿಐ (ಅಕಖ)ಸೇರಿದಂತೆ ಇಲಾಖೆಯ ಸಮಸ್ತ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.ಸಂಸ್ಥೆಯ ಮೇಲ್ವಿಚಾರಕರುಗಳಾದ ಮಂಜುಳಾ ಮತ್ತು ಮಂಜುನಾಥ, ಕೃಷಿ ಅಧಿಕಾರಿ ಸಂಜುಕುಮಾರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಮಂಜುಳಾ, ಕಚೇರಿ ಸಿಬ್ಬಂದಿಗಳಾದ ಗುರುರಾಜ್, ರಾಜೇಶ್ ಹಾಗೂ ಯೋಜನೆಯ ಸೇವಾ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.ವರದಿ: ಜಿಲಾನಸಾಬ್ ಬಡಿಗೇರ್, ಕಂಪ್ಲಿ

# ಜಾಲಹಳ್ಳಿಯಲ್ಲಿ ಮಿನಿ ಮದ್ಯದ ಅಂಗಡಿಗಳ ದರ್ಬಾರ್: DYFI ಆರೋಪ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಆ.30: ಜಾಲಹಳ್ಳಿ ಪಟ್ಟಣದಲ್ಲಿ ಸಣ್ಣಪುಟ್ಟ ಅಂಗಡಿಗಳು ಹಾಗೂ ಪಾನ್ ಡಬ್ಬಾಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದೆ ಎಂದು ಆರೋಪಿಸಿರುವ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಆಜಈಖ) ಜಾಲಹಳ್ಳಿ ವಲಯ ಸಮಿತಿ, ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಲ್ಲಿ ಪೊಲೀಸ್ ಹಾಗೂ ಅಬಕಾರಿ ಇಲಾಖೆ ನಿರ್ಲಕ್ಷ್ಯ ವಹಿಸುತ್ತಿವೆ ಎಂದು ದೂರಿದೆ.ಪಟ್ಟಣದ ಪೊಲೀಸ್ ಠಾಣೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದೆ. ಈ ಕುರಿತು ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದರೂ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಆಜಈಖ ಮುಖಂಡರು ಆರೋಪಿಸಿದ್ದಾರೆ. ಪೊಲೀಸ್ ಇಲಾಖೆ ಮಾಹಿತಿ ಇದ್ದರೂ ಕ್ರಮ ಕೈಗೊಳ್ಳುತ್ತಿಲ್ಲ ಹಾಗೂ ಅಬಕಾರಿ ಇಲಾಖೆ ಈ ವಿಷಯ ತಮ್ಮ ವ್ಯಾಪ್ತಿಗೆ ಸಂಬಂಧಿಸಿಲ್ಲ ಎಂಬ ರೀತಿಯಲ್ಲಿ ವರ್ತಿಸುತ್ತಿದೆ ಎಂದು ಸಂಘಟನೆ ದೂರಿದೆ.ಜಾಲಹಳ್ಳಿಯ 4ನೇ ವಾರ್ಡ್‌ನ ಗಾಣದಾಳ ರಸ್ತೆ, ತೇರಿನಪೇಟೆ, 7ನೇ ವಾರ್ಡ್‌ನ ಸಂತೆ ರಸ್ತೆ, 9ನೇ ವಾರ್ಡ್‌ನ ವಾಲ್ಮೀಕಿ ವೃತ್ತದಿಂದ ಮುಖ್ಯರಸ್ತೆ ಹಾಗೂ ಸಿನಿಮಾ ಮಂದಿರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಣ್ಣ ಅಂಗಡಿಗಳಲ್ಲಿಯೇ ಮದ್ಯ ಸುಲಭವಾಗಿ ದೊರೆಯುತ್ತಿದೆ ಎಂದು ಆಜಈಖ ಆರೋಪಿಸಿದೆ.ದೊಡ್ಡ ಮದ್ಯದ ಅಂಗಡಿಗಳಿಂದ ಪಾನ್ ಡಬ್ಬಾ ಹಾಗೂ ಸಣ್ಣ ಅಂಗಡಿಗಳಿಗೆ ಮದ್ಯ ಅಕ್ರಮವಾಗಿ





ಪೂರೈಕೆಯಾಗುತ್ತಿರುವುದೇ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ ಎಂದು ಸಂಘಟನೆ ಹೇಳಿದೆ. ಮದ್ಯದ ಅಂಗಡಿಗಳಿಗೆ ನೇರವಾಗಿ ತೆರಳಿ ಖರೀದಿಸಲು ಸಾಧ್ಯವಾಗದ ಯುವಕರಿಗೂ ಸಣ್ಣ ಅಂಗಡಿಗಳ ಮೂಲಕ ಸುಲಭವಾಗಿ ಮದ್ಯ ದೊರೆಯುತ್ತಿರುವುದರಿಂದ ಯುವಕರು ದುಶ್ಚಟಗಳಿಗೆ ಒಳಗಾಗುವ ಅಪಾಯ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದೆ.ಕೆಲ ವರ್ಷಗಳ ಹಿಂದೆ ಸ್ಟಿಂಗ್ ಜ್ಯೂಸ್ ಕುಡಿಯುತ್ತಿದ್ದ ಯುವಕರು ಇಂದು ಬಿಯರ್ ಬಾಟಲಿ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಜಈಖ ಮುಖಂಡರು ಬೇಸರ ವ್ಯಕ್ತಪಡಿಸಿದ್ದಾರೆ. ಮದ್ಯ ವ್ಯಸನದಿಂದ ಯುವಕರಲ್ಲಿ ಆರೋಗ್ಯ ಸಮಸ್ಯೆಗಳು, ಕುಟುಂಬ ಕಲಹಗಳು ಹಾಗೂ ಆರ್ಥಿಕ ಸಂಕಷ್ಟಗಳು ಹೆಚ್ಚಾಗುತ್ತಿವೆ. ಹಣದ ಅಗತ್ಯಕ್ಕಾಗಿ ಕೆಲವರು ಕಳ್ಳತನದಂತಹ ಅಪರಾಧ ಕೃತ್ಯಗಳಿಗೆ ಮುಂದಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಸಂಘಟನೆ ಆರೋಪಿಸಿದೆ.ಮದ್ಯ ಸೇವಿಸಿ ವಾಹನ ಚಲಾಯಿಸುವುದರಿಂದ ರಸ್ತೆ ಅಪಘಾತಗಳ ಸಂಭವ ಹೆಚ್ಚಾಗಿ, ಯುವಕರು ಪ್ರಾಣ ಕಳೆದುಕೊಳ್ಳುತ್ತಿರುವ ಘಟನೆಗಳೂ ನಡೆಯುತ್ತಿವೆ. ಸಣ್ಣ ವಯಸ್ಸಿನಲ್ಲಿಯೇ ಮದ್ಯ ವ್ಯಸನಕ್ಕೆ ಒಳಗಾಗುತ್ತಿರುವ ಯುವಕರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಆಜಈಖ ತಿಳಿಸಿದೆ.ಜಂಟಿ ಕಾರ್ಯಾಚರಣೆಗೆ ಆಗ್ರಹಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಸಣ್ಣಪುಟ್ಟ ಅಂಗಡಿಗಳು ಮತ್ತು ಪಾನ್ ಡಬ್ಬಾಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವನ್ನು ಕೂಡಲೇ ತಡೆಗಟ್ಟಬೇಕು. ಅಕ್ರಮವಾಗಿ ಮದ್ಯ ಪೂರೈಸುತ್ತಿರುವವರ ವಿರುದ್ಧವೂ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಜಈಖ ಜಾಲಹಳ್ಳಿ ವಲಯ ಸಮಿತಿ ಆಗ್ರಹಿಸಿದೆ.ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕದೆ ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಇಲಾಖೆಗಳ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಆಜಈಖ ಜಾಲಹಳ್ಳಿ ವಲಯ ಸಮಿತಿ ಮಾಧ್ಯಮದ ಮೂಲಕ ಎಚ್ಚರಿಕೆ ನೀಡಿದೆ.ಈ ಸಂದರ್ಭದಲ್ಲಿಆಜಈಖ ಮುಖಂಡರಾದ ಕೊಂಡಯ್ಯ ಗೋಸ□□□ಧ್ಯಕ್ಷರು, ಆಜಈಖ ಜಾಲಹಳ್ಳಿ ವಲಯ ಸಮಿತಿವೆಂಕಟೇಶ ತ್ಯಾಪ್ಲಿಕಾರ್ಯದರ್ಶಿ, ಆಜಈಖ ಜಾಲಹಳ್ಳಿ ವಲಯ ಸಮಿತಿವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ದೇವದುರ್ಗ ಕ್ಷೇತ್ರದಲ್ಲಿ ಹೊಸ ಮತದಾರರ ನೋಂದಣಿಗೆ ಜಾಲಹಳ್ಳಿಯಲ್ಲಿ ವಿಶೇಷ ಅಭಿಯಾನ

### 18 ವರ್ಷ ಪೂರೈಸಿದ ಯುವ ಮತದಾರರು ಹೆಸರು ನೋಂದಾಯಿಸಿಕೊಳ್ಳಲು ಅವಕಾಶ

ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ, ಆ.30: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಖಖಖ)-2026ರ ಅಂಗವಾಗಿ 56-ದೇವದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಮತದಾರರ ನೋಂದಣಿ ಹಾಗೂ ಮತದಾರರ ಪಟ್ಟಿಯಲ್ಲಿನ ಹೆಸರು ಮತ್ತು ವಿವರಗಳ ಪರಿಶೀಲನೆಗಾಗಿ ಜಾಲಹಳ್ಳಿ ಭಾಗ ಸಂಖ್ಯೆ 110 (ವಾರ್ಡ್ ನಂ.4)ರಲ್ಲಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ.ಭಾಗ ಸಂಖ್ಯೆ 110ರ ಬಿಎಲ್‌ಒ (ಮತಗಟ್ಟೆ ಮಟ್ಟದ ಅಧಿಕಾರಿ) ಶ್ರೀಮತಿ ಭಾಗ್ಯಶ್ರೀ ಅವರ ನೇತೃತ್ವದಲ್ಲಿ ನಡೆದ ಅಭಿಯಾನದಲ್ಲಿ, 18 ವರ್ಷ ಪೂರೈಸಿದ ಅರ್ಹ ಯುವಕ-ಯುವತಿಯರು ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ಸೇರ್ಪಡೆಗೊಳಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಯಿತು. ಈಗಾಗಲೇ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದಿರುವವರು ತಮ್ಮ ಹೆಸರು, ವಿಳಾಸ ಸೇರಿದಂತೆ ಇತರ ವಿವರಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸಿಕೊಳ್ಳುವಂತೆ ತಿಳಿಸಲಾಯಿತು.ವಿಶೇಷ ಅಭಿಯಾನವು ಆ.29 ಮತ್ತು 30ರಂದು ಹಾಗೂ ಸೆ.19 ಮತ್ತು 20ರಂದು ನಡೆಯಲಿದ್ದು, ಆಯಾ ಮತಗಟ್ಟೆ ಕೇಂದ್ರಗಳಲ್ಲಿ ಮತದಾರರ ನೋಂದಣಿ ಮತ್ತು ಪರಿಶೀಲನೆಗೆ ಅವಕಾಶ ಕಲ್ಪಿಸಲಾಗಿದೆ. ಹೊಸ ಮತದಾರರ ನೋಂದಣಿಗೆ ಖಖಐಅ ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣಪತ್ರ (ಖಿಅ), ತಂದೆ ಅಥವಾ ತಾಯಿಯ ಮತದಾರರ ಗುರುತಿನ ಚೀಟಿ (ಗಿಂಣಜಡಿ ಖಳಆ) ಜೆರಾಕ್ಸ್ ಪ್ರತಿ, ಆಧಾರ್ ಕಾರ್ಡ್ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ಬಿಎಲ್‌ಒ ಅವರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.ಪ್ರತಿಯೊಬ್ಬ ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ವಿಶೇಷವಾಗಿ 18 ವರ್ಷ ಪೂರೈಸಿದ ಯುವ ಮತದಾರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಭಾಗ ಸಂಖ್ಯೆ 110ರ ಬಿಎಲ್‌ಒ ಶ್ರೀಮತಿ ಭಾಗ್ಯಶ್ರೀ ಅವರು ತಿಳಿಸಿದರು. ಹಾಜರಿದ್ದವರುಈ ಸಂದರ್ಭದಲ್ಲಿ ಮುಖಂಡರಾದ ಮಕ್ತುಮ್ ಪರಾಶಿ ,ಬಾಬಾ ಮೆಡಿಕಲ್, ಕೆರೆಲಿಂಗಪ್ಪ, ರಾಮು ಟೈಲರ್, ಬಾಬು ಗಾಂಜಿ, ಮಹೇಬೂಬ್ ಪರಾಶಿ, ಸಿದ್ದಪ್ಪ ತೆಗೆಳ್ಳಿ, ಶಿವಪ್ಪ ಕಾರ್ಪೆಂಟರ್, ಸುರೇಶ್ ಪೂಜಾರಿ, ಖುರ್ಷಿದ್ ಪಟೇಲ್, ಸುರೇಶ್ ಬಾಬು, ಕಲೀಮ್ ಉದ್ದಾರ, ಇಬ್ರಾಹಿಂ ಯಾದ್ಗೀರ್, ರಾಜು ತವಗ್, ರಾಜಮೊಹಮ್ಮದ್ ಸುರ್ನೋಬತ್, ಸಾಬಮ್ಮ ಆಶಾ ಕಾರ್ಯಕರ್ತೆ, ಮಾಲನಬೀ ಅಂಗನವಾಡಿ ಕಾರ್ಯಕರ್ತೆ, ಹೈದೆರಭಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಬಿಎಲ್‌ಒ ಶ್ರೀಮತಿ ಭಾಗ್ಯಶ್ರೀ ಸೇ-ರಿದಂತೆ ಹಲವರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಕ್ರೀಡೆ ದೈಹಿಕ-ಮಾನಸಿಕ ವಿಕಸನಕ್ಕೆ ಪೂರಕ: ಅಧ್ಯಕ್ಷ ವಜ್ಜಲ್

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಕ್ರೀಡೆಯಲ್ಲಿ ಸೋಲು ಗೆಲುವೇ ಮುಖ್ಯವಲ್ಲ, ಭಾಗವಹಿಸುವಿಕೆ ಮುಖ್ಯವಾಗಿದೆ. ಇಂದಿನ ಸೋಲು ನಾಳಿನ ಗೆಲುವಿಗೆ ಸೋಪಾನ, ಸೋಲು ಗೆಲುವು ಸಮಾನವಾಗಿ ಸ್ವೀಕರಿಸಿ, ಕ್ರೀಡಾ ಮನೋಭಾವದೊಂದಿಗೆ ಆಟವಾಡಲು ಪ್ರಯತ್ನಿಸಿ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಟಿ.ವಜ್ಜಲ್ ಹೇಳಿದರು. ಇತ್ತೀಚಿಗೆ ತಾಲೂಕಿನ ಬಿಳೆಭಾವಿ ಗ್ರಾಮದ ಶ್ರೀ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆ ಮೈದಾನದಲ್ಲಿ ಶಾಲಾ ಶಿಕ್ಷಣ, ಕ್ಷೇತ್ರ ಶಿಕ್ಷಣಾಧಿಕಾ-ರಿಗಳ, ಕ್ಷೇತ್ರ ಸಮನ್ವಯ ಅಧಿಕಾ-ರಿಗಳ ಕಾರ್ಯಾಲಯ ಮುದ್ದೇಬಿಹಾಳ ಹಾಗೂ ಸರಕಾರಿ ಹಿರಿಯ ಪ್ರಾಥ-'ಮಿಕ ಶಾಲೆ ಬಿಳೇಭಾವಿ ಇವರ ಸಂಂ-ಮುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಬಿ.ಸಾಲವಾಡಗಿ ಕ್ಲಸ್ಟರ್ ಮಟ್ಟದ ಪ್ರಾಥ-'ಮಿಕ ಶಾಲೆಗಳ ಕ್ರೀಡಾಕೂಟದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕ್ರೀಡಾಕೂಟವನ್ನು ಉದ್ಘಾಟಿಸಿ ಶ್ರೀ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆಯ ಕಾರ್ಯದರ್ಶಿ ಸಿದ್ದನಗೌಡ ಪರಸನಳ್ಳಿ ಅವರು ಮಾತನಾಡಿ ಕ್ಲಸ್ಟರ್ ಮಟ್ಟದಲ್ಲಿ ನಡೆಯುತ್ತಿರುವ ಈ ಕ್ರೀಡೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಅತ್ಯುತ್ತಮ ಪ್ರದರ್ಶನ ನೀಡಿ ತಾಲೂಕ ಹಾಗೂ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು ಎಂದರು. ಬಿ.ಸಾಲವಾಡಗಿ ಸಮೂಹ ಸಂಪನ್ಮೂಲ ವ್ಯಕ್ತಿ (ಸಿ.ಆರ್ ಸಿ) ಎಸ್ ಎಸ್ ಬಿಂಜಲಭಾವಿ ಪ್ರಾಸ್ತಾವಿಕವಾಗಿ ಮಾತನಾಡಿ ಕ್ರೀಡಾಕೂಟದ ಮಹತ್ವವನ್ನು ತಿಳಿಸಿದರು. ದೈಹಿಕ ಶಿಕ್ಷಕ ರಾಮನಗೌಡ ಬಿರಾದಾರ ಕ್ರೀಡಾ ಪ್ರತಿಜ್ಞಾವಿಧಿ ಭೋದಿಸಿದರು. ಕ್ರೀಡಾಕೂಟದಲ್ಲಿ ಬಿ. ಸಾಲವಾಡಗಿ ಕ್ಲಸ್ಟರ್ ವ್ಯಾಪ್ತಿಯ ಎಂಟು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಗ್ರಾಮೀಣ ಭಾಗದ ಕಬಡ್ಡಿ, ಕೋ ಕೋ, ವಾಲಿಬಾಲ್, ತ್ರೋಬಾಲ್, ಉದ್ದ ಜಿಗಿತ, ಎತ್ತರ ಜಿಗಿತ, ಓಟ, ಗುಂಡು ಎಸೆತ, ಚಕ್ರ ಎಸೆತ ಕ್ರೀಡೆಗಳ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಬಾಲಕ,ಬಾಲಕೀಯರಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಎಸ್ ಬಿ ಬೀರಗೊಂಡ, ಖಜಾಂಚಿ ಆರ್.ಎಸ್. ಹಿಪ್ಪರಗಿ, ಶ್ರೀ ಮಾರುತಿ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕಿ ನಿರ್ಮಲಿ ಎಸ್.ಗಡಗಿ, ಶ್ರೀ ವಿನಾಯಕ ಇಂಟ-ರ್ನ್ಯಾಷನಲ್ ಶಾಲೆ ಅಧ್ಯಕ್ಷ ಸಂಗಮೇಶ ದೇಸಾಯಿ. ಶ್ರೀ ಭಾಗ್ಯವಂತಿ ಎಚ್‌ಪಿಎಸ್ ಮುಖ್ಯ ಗುರುಗಳಾದ ವಿಷ್ಣು ನಾಯಕ್, ಶಿಕ್ಷಕ ಎಂ.ಎ.ಬಾಗಲಕೋಟ, ವಿವಿಧ ಪ್ರಾಥಮಿಕ ಶಾಲೆಗಳ ಮು.ಗು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಚನ ದರ್ಶನ

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ.
ಮಾಡಿದೆನೆನ್ನದಿರಾ ಲಿಂಗಕ್ಕೆ!ಮಾಡಿದೆನೆನ್ನದಿರಾ
ಜಂಗಮಕ್ಕೆ!ಮಾಡಿದೆನೆಂಬುದು ಮನದಲಿಲ್ಲದಿದ್ದರೆ
ಬೇಡಿದ್ದನೀವ ಕೂಡಲಸಂಗಮದೇವ!*

ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನ ಸಾಹಿತ್ಯದ ಒಂದು ಸಾಲು. "ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ, ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬುದು ಈ ವಚನದ ಆರಂಭವಾಗಿದೆ.

"ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ, ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬುದು ಜಗಜ್ಯೋತಿ ಬಸವಣ್ಣನವರ ಪ್ರಸಿದ್ಧ ವಚನವಾಗಿದೆ. ಭಗವಂತನಿಗೆ ಅಥವಾ ಗುರು–ಲಿಂಗ–ಜಂಗಮಕ್ಕೆ ದಾಸೋಹ ಮಾಡಿ, ಅದನ್ನು ನಾನು ಮಾಡಿದೆ ಎಂಬ ಅಹಂಕಾರ ಮನದಲ್ಲಿ ಬಂದರೆ ಅದು ದೊಡ್ಡ ದೋಷವೆಂದು ಈ ವಚನ ಸಾರುತ್ತದೆ.

ಅಹಂಕಾರ ಬೇಡ. ಲಿಂಗಕ್ಕಾಗಲಿ, ಜಂಗಮಕ್ಕಾಗಲಿ ಸಮಾಜಕ್ಕಾಗಲಿ ನಾವೇನು ಧರ್ಮವನ್ನಾಗಲಿ ಸೇವೆಯನ್ನಾಗಲಿ ಮಾಡಿದೆವು ಎಂಬ ಅಹಂ ಅಥವಾ ಕರ್ತೃತ್ವ ಭಾವ ಮನದಲ್ಲಿ ಮೂಡಬಾರದು.

ಶಿವನ ಡಂಗುರ.ನಾನು ಮಾಡಿದೆ ಎಂಬ ಗರ್ವವಿದ್ದರೆ ಶಿವನ ನಿಯಮದಂತೆ ಅದು ಕಾಡುತ್ತದೆ, ಅಂದರೆ ಅಹಂಕಾರವು ಆಧ್ಯಾತ್ಮಿಕ ಸಾಧನೆಗೆ ಮಾರಕವಾಗುತ್ತದೆ.

ನಿಷ್ಕಾಮ ಸೇವೆ. ನಾನು ಮಾಡಿದೆ ಎಂಬ ಅಹಭಾವ ಮನದಲ್ಲಿ ಇಲ್ಲದೆ, ನಿಸ್ವಾರ್ಥವಾಗಿ ಹಾಗೂ ಶ್ರದ್ಧೆಯಿಂದ ಸೇವೆ ಮಾಡಿದರೆ ನಮ್ಮ ಕೂಡಲಸಂಗಮದೇವನು ನಾವು ಬೇಡಿದ್ದನ್ನೆಲ್ಲ ಕರುಣಿಸುತ್ತಾನೆ. ಶರಣು ಶರಣಾರ್ಥಿಗಳು.

**– ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ ಸಿಂಧನೂರು**

### ಶ್ರದ್ಧೆಯಿಂದ ನಡೆದ ಶ್ರೀ ರಾಯರ ಆರಾಧನಾ ಮಹೋತ್ಸವ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಪಟ್ಟಣದ ಎಸ್‌ಎನ್‌ಪೇಟೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಯ ಶಾಖಾ ಮಠದಲ್ಲಿ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮದ 355ನೇ ಆರಾಧನ ಮಹೋತ್ಸವ ಶ್ರದ್ಧಾಭಕ್ತಿಯಿಂದ ಭಾನುವಾರ ನಡೆಯಿತು.ಬೆಳಿಗ್ಗೆ ಸುಪ್ರಭಾರತ, ನಿರ್ಮಾಲ್ಯ ವಿಸರ್ಜನೆ, ಅಷ್ಟೋತ್ತರ ಸಹಿತ ಫಲ ಪಂಚಾಮೃತ, ಕನಕಾಭಿಷೇಕ, ನೈವೇದ್ಯ, ಹಸ್ತೋದಕ, ಮಹಾಮಂಗಳಾರತಿ, ಅಲಂಕಾರ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಶಾಸಕ ಜೆ.ಎನ್.ಗಣೇಶ್ ಅವರು ಆರಾಧನ ಮಹೋತ್ಸವದಲ್ಲಿ ಭಾಗವಹಿಸಿ, ದೇವರ ದರ್ಶನದೊಂದಿಗೆ ಪುನೀತರಾದರು.ಈ ಸಂದರ್ಭದಲ್ಲಿ ವಿಚಾರಣಕರ್ತರಾದ ಟಿ.ಕೊಟ್ರೇಶ, ವ್ಯವಸ್ಥಾಪಕ ಪುರುಷೋತ್ತಮ ಆಚಾರ್, ಪುರೋಹಿತರಾದ ವಿಜಯಾಚಾರ್, ಗುರುರಾಜ ಸೇವಾ ಮತ್ತು ಮಹಿಳಾ ಭಜನಾ ಮಂಡಳಿಯವರು ಸೇರಿದಂತೆ ಭಕ್ತರು ಪಾಲ್ಗೊಂಡಿದ್ದರು. ಸಂಜೆ ರಾಘವೇಂದ್ರ ಸ್ವಾಮಿಯ ರಥೋತ್ಸವ, ಸ್ವಸ್ತಿವಾಚನ, ತೊಟ್ಟಿಲು ಸೇವಾ, ಮಹಮಂಗಳಾರತಿ ನಡೆದವು. ನಂತರ ನಿಧಿ ರೆಡ್ಡಿ ಬೆಂಗಳೂರು ಮತ್ತು ಟಿ.ಎ.ನಾಗಶ್ರೀ ಬೆಂಗಳೂರು ಇವರಿಂದ ಭರತನಾಟ್ಯ ಕಾರ್ಯಕ್ರಮಗಳು ಜರುಗಿದವು.ವರದಿ : ಜಿಲಾನಸಾಬ್ ಬಡಿಗೇರ್

# ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಶಾಂತಿ ಪಾಲನಾ ಸಭೆ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ:ಸಪ್ಟಂಬರ್ 14ರಿಂದ ಆರಂಭವಾಗುವ ಗಣೇಶ ಹಬ್ಬದ ನಿಮಿತ್ಯವಾಗಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಶನಿವಾರ ಶಾಂತಿ ಪಾಲನಾ ಸಭೆ ಹಮ್ಮಿಕೊಳ್ಳಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿ PSI ಜ್ಯೋತಿ ಖೋತ ಅವರು ಮಾತನಾಡಿ ಗಣೇಶ ಚತುರ್ಥಿ ಹಬ್ಬವನ್ನು ಪಟ್ಟಣದಲ್ಲಿ ಪರಸ್ಪರ ಪ್ರೀತಿ, ಶಾಂತಿ ಹಾಗೂ ಸೌಹಾರ್ದತೆಯೊಂದಿಗೆ ಆಚರಿಸಿ. ಯಾವ ಕಾರಣಕ್ಕೂ ಕಾನೂನು ಸುವ್ಯವಸ್ಥೆ ಕಡೆದಂತೆ ನೋಡಿಕೊಳ್ಳಿ, ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಇಲಾಖೆಯಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಗಣೇಶ ಹಬ್ಬ ಆಚ–'ರಣೆಗೆ ಇಲಾಖೆಯಿಂದ ಮಾರ್ಗ ಸೂಚಿಗಳನ್ನು ನೀಡಲಾಗಿದೆ ಇದರಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡುವ ಮಂಡಳಿಗಳು ಸ್ಥಳಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮೆರಾ ಅಳವಡಿಸಬೇಕು ಇಲ್ಲದಿದ್ದಲ್ಲಿ ಪರವಾನಿಗೆ ನೀಡಲಾಗುವುದಿಲ್ಲ. ವೇದಿಕೆ ಯಾವುದೇ ಗೊಂದಲಗಳಿಗೆ ಅವಕಾಶ ಆಗದಂತೆ ನಿರ್ಮಿಸಿ, ಯಾವ ಕಾರಣಕ್ಕೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬರಬಾರದು, ಗಣೇಶನನ್ನು ಪ್ರತಿಷ್ಠಾಪನೆ ಮಾಡಿದ ಸ್ಥಳದ ಅಕ್ಕಪಕ್ಕದಲ್ಲಿ ಯಾವುದೇ ರೀತಿಯ ಕೆಟ್ಟ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳಿ ಸ್ಥಳದ ಪಾವಿತ್ರತೆಯನ್ನು ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಈ ಕುರಿತು ಅಗತ್ಯ ಬಿದ್ದಲ್ಲಿ ಪ್ರತಿಷ್ಠಾಪನಾ ಮಂಡಳಿಯ ಮುಖ್ಯಸ್ಥರ ಇನ್ನೂ ಒಂದೆರಡು ಸಭೆಗಳು ನಡೆಯಲಿವೆ ದಯವಿಟ್ಟು ಇಲಾಖೆಯೊಂದಿಗೆ ಸಹಕರಿಸಿ ಎಂದು ಕೇಳಿಕೊಂಡರು. ಗಣೇಶ ಪ್ರತಿಷ್ಠಾಪನಾ ಮಂಡಳಿಯ ಸದಸ್ಯರು ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಪಟ್ಟಣದ ಪ್ರಮುಖರಾದ ಎಂ.ಜಿ. ಪಾಟೀಲ, ಸಿದ್ದನಗೌಡ ಪಾಟೀಲ ನಾವದಗಿ, ಸಂಭಾಜಿ–ರಾವ್ ವಾಡ್ಕರ್, ಬಸನಗೌಡ ಮಾಲಿಪಾಟೀಲ, ರಾಘವೇಂದ್ರ ವಿಜಾಪುರ, ನಾಗರಾಜ ಬಳಿಗಾರ, ಎಎ□□□ಗಳಾದ ಸಿ.ಎಸ್.ಭಂಗಿ, ಬಿ.ಜಿ.ಬಲಕಲ್, ಸಿಬ್ಬಂದಿಗಳಾದ ಎಂ.ಎಲ್. ಪಟ್ಟೇದ, ಸಿದ್ದನಗೌಡ ದೊಡ್ಡಮನಿ, ಪ್ರಭುಗೌಡ ಎಸ್‌ಜಿ, ಸಂಗಮೇಶ ಅಮ್ಮ್ಯಾಳ,ವೀರೇಶ ಬಿರಾದಾರ, ಎ□□□ಸ್ ಗಿರಿಸಾಗರ, ಪ್ರಭು ಗಣತಿ, ಸೈಫನ್ ಕುರಿ, ಬಿ ಎಸ್ ಬೀಳಗಿ, ರವಿ ಬಿರಾದಾರ, ಬಸವರಾಜ ಹಡಗಲಿ ಹಾಗೂ ಗಣೇಶ ಪ್ರತಿಷ್ಠಾಪನಾ ಮಂಡಳಿಯ ಪದಾಧಿಕಾರಿಗಳು ಇದ್ದರು.

# ಬಳಗಾನೂರ ಪಿಕೆಪಿಎಸ್ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ ಅಧ್ಯಕ್ಷರಾಗಿ ಚಂದ್ರಶೇಖರ, ಉಪಾಧ್ಯಕ್ಷರಾಗಿ ಈರಮ್ಮ ಅವಿರೋಧ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ತಾಲೂಕಿನ ಬಳಗಾನೂರ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಇದರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಚಂದ್ರಶೇಖರ ಅಲದಿ(ದೇಸಾಯಿ), ಹಾಗೂ ಉಪಾಧ್ಯಕ್ಷರಾಗಿ ಈರಮ್ಮ ಶಿವನಗೌಡ ಬಿರಾದಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಈ ಮೊದಲಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ರಾಜೀನಾಮೆಯಿಂದಾಗಿ ತೆರವಾದ ಸ್ಥಾನಗಳಿಗೆ ಈ ಚುನಾವಣೆ ಸಂಘದ ಕಾರ್ಯಾಲಯದ ಸಭಾಂಗಣದಲ್ಲಿ ಶನಿವಾರ ಜರುಗಿತು. ಸದರಿ ಚುನಾವಣಾ ಪ್ರಕ್ರಿಯೆಯಲ್ಲಿ ಸಂಘದ ಎಲ್ಲ ಸದಸ್ಯರು ಹಾಜರಾಗಿದ್ದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲನಗೌಡ ಬಿರಾದಾರ ಚುನಾವಣಾ ಪ್ರಕ್ರಿಯೆ ನಿರ್ವಹಿಸಿದರು. ಈ ಸಂದರ್ಭದಲ್ಲಿ ಅವಿರೋಧವಾಗಿ ಆಯ್ಕೆಯಾದ ನೂತನ ಅಧ್ಯಕ್ಷ ಚಂದ್ರಶೇಖರ ಅಲದಿ ಅವರು ಮಾತನಾಡಿ ಸಂಘದ ಎಲ್ಲ ಸದಸ್ಯರು ನಮ್ಮ ಮೇಲೆ ವಿಶ್ವಾಸವಿಟ್ಟು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ ಅವರೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘದ ಅಭಿವೃದ್ಧಿಗೆ ಶಕ್ತಿಮೀರಿ ಕೆಲಸ ಮಾಡುತ್ತೇವೆ ಎಂದು ಹೇಳಿದರು. ನೂತನವಾಗಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಈರಮ್ಮ ಶಿವನಗೌಡ ಬಿರಾದಾರ ಅವರು ಮಾತನಾಡಿ ನಮ್ಮಿಬ್ಬರನ್ನು ಅವಿರೋಧವಾಗಿ ಆಯ್ಕೆ ಮಾಡಿದ ಸಂಘದ ಎಲ್ಲ ಸದಸ್ಯರಿಗೆ ಹಾಗೂ ಮಾರ್ಗದರ್ಶನ ಮಾಡಿದ ಗ್ರಾಮದ ಗಣ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಈ ಸಮಯದಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರಾದ ನೀಲಪ್ಪ ನರಸುಣಗಿ, ಶಿವಪ್ಪ ಸಾಸನೂರ, ರಾಮನಗೌಡ ಹಂದಿಗನೂರ, ಸಿದ್ರಾಮಪ್ಪ ಅಲದಿ, ಲೋಹಿತಕುಮಾರ ವಾಲಿಕಾರ, ಶಾರದಾ ಚ.ಸಾಸನೂರ, ಇಮಾಮಸಾ ಬಾಗವಾನ, ನಿಂಗಪ್ಪ ಹರಿಜನ, ಶ್ರೀಶೈಲ ಬಂಟನೂರ, ಗ್ರಾಮದ ಹಿರಿಯರಾದ ಮಲ್ಲಣ್ಣ ದೋರನಹಳ್ಳಿ, ಚೆನ್ನಣ್ಣ ಅಲದಿ, ಸಿಬ್ಬಂದಿಗಳಾದ ವೀರೇಶ ಬಾಗೇವಾಡಿ, ಹಾಜೇಸಾ ವಾಲಿಕಾರ ಮತ್ತಿತರರು ಇದ್ದರು.

# ಹುಸೇನಪುರ ಕ್ರಾಸ್ ಬಳಿ ವ್ಯಕ್ತಿಯ ಮೃತದೇಹ ಪತ್ತೆ

❑ ನೈಜ್ಯ ದೆಸೆ ನ್ಯೂಸ್





ಕವಿತಾಳ : ಪಟ್ಟಣ ಸಮೀಪದ ಹುಸೇನಪುರ ಕ್ರಾಸ್ ಬಳಿ ಗದ್ದೆಯಲ್ಲಿ ಸುಮಾರು 30 ವರ್ಷದ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು ಹಲವಾರು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ, ಮೃತ ವ್ಯಕ್ತಿಯನ್ನು ನಕ್ಕುಂದಿ ಗ್ರಾಮ ರಮೇಶ ಎಂದು ಗುರುತಿಸಲಾಗಿದೆ. ಇತನು ತಮ್ಮ ಅಣ್ಣನ ಜೊತೆ ಬೆಂಗಳೂರಿನಲ್ಲಿ ದುಡಿಯಲು ಹೊಗಿದ್ದು ಊರಿಗೆ ಹೋಗಿ ಬರುದಾಗಿ ಹೇಳಿಅಲ್ಲಿಂದ ಬಂದಿದ್ದಾನೆ ಆದರೇ ಮೃತ ವ್ಯಕ್ತಿಯು ಕವಿತಾಳ ಬಳಿ ಹುಸೇನಪುರ ಕ್ರಾಸ್ ಹತ್ತಿರ ಗದ್ದೆಯಲ್ಲಿ ಮೃತದೇಹ ಪತ್ತೆಯಗಿದೆ ಕವಿತಾಳ ಪೊಲೀಸ್ ಠಾಣೆಯಲ್ಲಿ ಪ್ರಕಣ ದಾಖಲಿಸಿಕೊಂಡಿ ತನಿಖೆ ಮುಂದುವರೆಸಿದ್ದಾರೆ.ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿ ಜಿ.ಹರೀಶ್ ಕುಮಾರ್, ಲಿಂಗಸುಗೂರು ಡಿವೈಎಸ್‌ಪಿ ದತ್ತಾತ್ರೇಯ ಕಾರ್ನಾಡ್, ಸಿಂಧನೂರು ಡಿವೈ–ಎಸ್‌ಪಿ ಚಂದ್ರಶೇಖರ್ ನಾಯಕ್, ಮಾನಸಿ ಸಿಪಿಐ ವಿನಾಯಕ, ಹಟ್ಟಿ ಸಿಪಿಐ ಶಿವಾನಂದ, ಪಿಎಸ್‌ಐಗಳಾದ ರಂಗಯ್ಯ, ಅಜ್ಮೀರ್ ಪಾಶಾ, ಪೊಲೀಸ್ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿ ಶರಣಬಸ್ಸಪ್ಪ, ದುರುಗೇಶ ಸೇರಿದಂತೆ ಇನ್ನಿತರ ಅಧಿಕಾರಿಗಳಿ ಸ್ಥಳ ಪರಿಶೀಲನೆ ನಡೆಸಿದ್ದು ಮೃತ ದೇಹವನ್ನು ಜಿಲ್ಲಾ ಆಸ್ಪತ್ರೆಗೆ ಮರೋಣತ್ತರ ಪರೀಕ್ಷೆಗೆ ಸಾಗಿಸಲಾಗಿದೆ .'ಬೆಂಗಳೂರಿನಿಂದ ನಕ್ಕುಂದಿಗೆ ಬರಬೇಕಾದ ವ್ಯಕ್ತಿ ಇಲ್ಲಿಗೆ ಬಂದದ್ದು ಹೇಗೆ ಎಂಬುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ ,ಇದು ಆಕಸ್ಮಿಕ ಸಾವೋ ಅಥವಾ ಕೊಲೆಯೋ ಎಂಬ ಶಂಖೆ ಮೂಡಿದ್ದು ದಲಿತ ಮುಖಂಡ ಅರಳಪ್ಪ ತುಪ್ಪದೂರು ಕುಲಂಕುಶವಾಗಿ ತನಿಖೆ ನಡೆಸಬೇಕು ಮತ್ತು ಜಿಲ್ಲೆಯಲ್ಲಿ ದಲಿತ ಯುವಕರ ಕೊಲೆಗಳು ಹೆಚ್ಚುತ್ತಿದ್ದು ರಕ್ಷಣೆ ಇಲ್ಲದಂತಾಗಿದೆ 'ಎಂದು ಆರೋಪಿಸಿದ್ದಾರೆ.

# ಇಸ್ಲಾಂ ಅತ್ಯಂತ ಮಾನವೀಯತೆಯಿಂದ ಕೂಡಿದ ಧರ್ಮ: ಸಚಿವ ರಾಯರಡ್ಡಿ

## "ಕುರ್‌ಆನ್ ಕೇವಲ ಮುಸ್ಲಿಮರಿಗೆ ಸೀಮಿತವಲ್ಲ, ಯಾರು ಬೇಕಾದರೂ ಓದಬಹುದು"

❑ ನೈಜ್ಯ ದೆಸೆ ನ್ಯೂಸ್





ಕುಕನೂರು : 'ಇಸ್ಲಾಂ ಧರ್ಮವು ಇತರ ಧರ್ಮಗಳಿಗಿಂತ ಶ್ರೇಷ್ಠ ಇಸ್ಲಾಂ ಕುರಿತು ಸಮಾಜದಲ್ಲಿ ತಪ್ಪು ಕಲ್ಪನೆಗಳಿವೆ. ಧರ್ಮದ ಮೂಲ ತತ್ವ ಪರಂಪರೆ ಹಾಗೂ ಇತಿಹಾಸವನ್ನು ಅರಿತುಕೊಳ್ಳಬೇಕು' ಎಂದು ಸಚಿವ ಬಸವರಾಜ ರಾಯರಡ್ಡಿ ಹೇಳಿದರು. ಪಟ್ಟಣದ ಶಾದಿ ಮಹಲ್‌ನಲ್ಲಿ ರವಿವಾರ ನಡೆದ 11 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಸ್ಲಾಂ ಅತ್ಯಂತ ಮಾನವೀಯತೆಯಿಂದ ಕೂಡಿದ ಧರ್ಮ. ಮನುಷ್ಯ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಧರ್ಮ ತಿಳಿಸಿಕೊಡುತ್ತದೆ. ಕುರ್‌ಆನ್ ಕೇವಲ ಮುಸ್ಲಿಮರಿಗೆ ಸೀಮಿತವಲ್ಲ. ಯಾರು ಬೇಕಾದರೂ ಓದಬಹುದು ಎಂದರು.'ನನಗೆ ಹಜ್ ಯಾತ್ರೆಗೆ ತೆರಳುವ ಆಸೆಯಿದೆ. ಆದರೆ ಹಜ್‌ಗೆ ತೆರಳಲು ಧರ್ಮ ಪರಿವರ್ತನೆ ಮಾಡಿಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕೆ ಆ ಆಸೆಯನ್ನು ಕೈಬಿಟ್ಟಿದ್ದೇನೆ' ಎಂದು ಹೇಳಿದರು.'ಜನರು ಮತಾಂಧರು ಹಾಗೂ ಜಾತಿವಾದಿಗಳಾಗಬಾರದು. ಕೇವಲ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿದ ಮಾತ್ರಕ್ಕೆ ಅಥವಾ ದೇವಸ್ಥಾನಕ್ಕೆ ತೆರಳಿದ ಮಾತ್ರಕ್ಕೆ ಎಲ್ಲವೂ ಸರಿಯಾಗುವುದಿಲ್ಲ. ಎಲ್ಲ ಧರ್ಮಗಳಲ್ಲಿರುವ ಉತ್ತಮ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಧರ್ಮಗಳ ನಡುವೆ ಜಗಳ ಹಚ್ಚಿ ರಾಜಕೀಯ ಲಾಭ ಪಡೆಯಬಾರದು. ರಾಜಕಾರಣದಲ್ಲಿ ಧರ್ಮ ಬೆರೆಯಬಾರದು' ಎಂದು ರಾಯರಡ್ಡಿ ಹೇಳಿದರು.ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಆದ್ಯತೆ: ಯತೀಂದ್ರ ಕಾರ್ಯಕ್ರಮದಲ್ಲಿ ಮಾತನಾಡಿದ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಮುಸ್ಲಿಂ ಸಮುದಾಯದ ಜನಸಂಖ್ಯೆ ದೊಡ್ಡದಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ. ಸಮುದಾಯದ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಮುಸ್ಲಿಂ ಸಮುದಾಯಕ್ಕೆ ಹೆಚ್ಚಿನ ಅನುದಾನ ದೊರೆತಿದೆ ಎಂದರು.'ಎಲ್ಲರ ಸೃಷ್ಟಿಕರ್ತ ಒಬ್ಬನೇ. ಪರಸ್ಪರ ಪ್ರೀತಿಯಿಂದ ಕಾಣಬೇಕು. ಧರ್ಮಗಳ ನಡುವೆ ಜಗಳ ಹಚ್ಚಿ ರಾಜಕೀಯ ಲಾಭ ಪಡೆಯಬಾರದು. ರಾಜಕಾರಣದಲ್ಲಿ ಧರ್ಮವನ್ನು ಬೆರೆಸುವ ಪಕ್ಷಗಳಿಗೆ ಜನರು ಬೆಂಬಲ ನೀಡಬಾರದು' ಎಂದು ಅವರು ಹೇಳಿದರು.ಶಾದಿ ಮಹಲ್‌ಗೆ 50 ಲಕ್ಷ ಅನುದಾನ ಕುಕನೂರಿನಲ್ಲಿ ಸುಮಾರು ರೂ. 1.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಶಾದಿ ಮಹಲ್ ಉತ್ತಮವಾಗಿ ನಿರ್ಮಾಣಗೊಂಡಿದ್ದು, ಫೈವ್‌ಸ್ಟಾರ್ ಹೋಟೆಲ್‌ನಂತಿದೆ ಎಂದು ರಾಯರಡ್ಡಿ ಮೆಚ್ಚುಗೆ ವ್ಯಕ್ತಪಡಿಸಿದರು.ಶಾದಿ ಮಹಲ್‌ನ ಪಕ್ಕದಲ್ಲಿ ಡೈನಿಂಗ್ ಹಾಲ್ ನಿರ್ಮಿಸಲು ಸರ್ಕಾರದಿಂದ 50 ಲಕ್ಷ ರೂ. ಅನುದಾನ ಕೊಡಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಅನುದಾನವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಡೈನಿಂಗ್ ಹಾಲ್ ನಿರ್ಮಿಸುವಂತೆ ಹಾಗೂ ಶಾದಿ ಮಹಲ್ ಸುತ್ತಲೂ ಕಾಂಪೌಂಡ್ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101